ಜನಪದ ವಿಚಾರ

ಸಂಪುಟ ೧೮
ಫೆಬ್ರವರಿ ೨೦೧೮
ಸಂಚಿಕೆ - ೭

ಜಾತ್ಯತೀತತೆ



ಈ ಸಂಚಿಕೆಯಲ್ಲಿ

ಜನಪದ ವಿಚಾರ

ತಿಂಗಳ ವೈಚಾರಿಕ ಪತ್ರಿಕೆ

ಫೆಬ್ರವರಿ – ೨೦೧೮
ಸಂಪುಟ – ೧೮
ಸಂಚಿಕೆ – ೭

ಸಂಚಿಕೆಯ ಸಂಪಾದಕರು

ಸಂತೋಷ್ ಕೌಲಗಿ

ಚಂದಾವಿವರ

ವಾರ್ಷಿಕ : ರೂ ೨೦೦/–
ಬಿಡಿ ಸಂಚಿಕೆ : ರೂ ೨೦/–

ಸಂಪರ್ಕವಿಳಾಸ

ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ – ೫೭೧೪೩೧
ಮಂಡ್ಯ ಜಿಲ್ಲೆ

ದೂರವಾಣಿ

೦೨೩೬ ೨೯೯೮೫೪
೭೮೨೯೪೮೯೧೪೭

Email : janapada@yahoo.com
web : janapada.org

ಪುರಂದರದಾಸರು

ದಾಸರೆಂದರೆ ನಮ್ಮ ವರ ಪುರಂದರರಯ್ಯ:
ಇದ್ದು ಇಲ್ಲೇ ಅಲ್ಲಿಗೇರಿದವರು.
ಸಹಜಮುಕ್ತಿಯ ನೌಕೆ ಬರುವವರೆಗೂ ಇಲ್ಲೆ
ಈಸಿದವರು ಇದ್ದು ಜೈಸಿದವರು.

ಬೀದಿತಿರುಕನ ಹಾಗೆ ದೈವ ಬಂದಾರಿಸಿತು:
ಸಾರಿಸಿತು ಇವರೆದೆಯ, ಹಾರಿಸಿತ್ತು;
ಒದ್ದೆ ಅರಿವೆಯ ಹಿಂಡಿ ರಾಗವನು ಅರಿವಿಂದ
ಆರಿಸಿತು: ದಾಸತ್ವಕೇರಿಸಿತ್ತು.

ನತ್ತು ಕೊಟ್ಟಳು ಹರಿಗೆ, ಅತ್ತು ಬಿಟ್ಟಳು ಮರೆಗೆ
ಪತಿಯನಿತ್ತಳು ಕೊಡುಗೆ ದೇವನಡಿಗೆ.
ಹೆಣ್ಣು ಮಾಯೆಯ ನೆರಳೆ? ಹೆಣ್ಣು ಗಂಡಿನ ಮರುಳೆ?
ಹೇಳಲೆದೆ ಉಂಟೇನು ಹಾಗಿವಳಿಗೆ?

ಮೈಮರೆತು ಹರಿಸ್ಮರಣೆ ಮಾಡಿದರು, ಹಾಡಿದರು;
ಹತ್ತು ಜನ ಕೂಡಿದರು ಹರಿಭಕ್ತರು.
ಈವೊತ್ತು ಈ ಕೊಂಪೆ, ನಾಳೆ ದೂರದ ಹಂಪೆ–
ಹರಿಯಿಂಪ, ನರುಗಂಪ ಹರಡಿದ್ದರು.

ಕವಿಯಂತೆ ಆಡಿದರೆ? ಇಲ್ಲಿಲ್ಲ ತಮ್ಮನ್ನೆ
ಮಿಡಿಸಿದರು, ನುಡಿಸಿದರು ಪ್ರಾಣ ದುಡುಕಿ;
ಹಾಡಿದರೆ? ಅಲ್ಲಲ್ಲ ಭಕ್ತಿಯನೆ ಕಾಡಿದರು
ಮನವ ಜಾಲಾಡಿದರು ಹರಿಯ ಹುಡುಕಿ.

ಕಲ್ಲು, ತಿಕ್ಕುವ ಕಲ್ಲು ನಮ್ಮ ದಾಸರ ಭಕ್ತಿ
ಅಲ್ಲಿ ಸತ್ತ್ವಪರೀಕ್ಷೆ ನಡೆಯಬೇಕು;
ಮದರಂಗಿಯಂತೆ ಮನ ತೇದು, ಮೇಲಿನ ರಂಗು
ಮರೆಯಾಗಿ ಒಳಬಣ್ಣ ಒಡೆಯಬೇಕು.

ದೇಹ ಬೀಜದ ಹಾಗೆ ಎತ್ತಲೋ ಮರೆಯಾಗಿ
ಭಕ್ತಿ ಹೆಮ್ಮರವಾಗಿ ಏಳಬೇಕು.
ಖೇದ, ಹರಿನಾದದಲಿ ಹದವಾಗಿ ಮುದವಾಗಿ
ಮಾರ್ಪಟ್ಟು ಮರುಹುಟ್ಟು ತಾಳಬೇಕು.

ಹತ್ತಾರು ರಂಗುಗಳು ಹೊಸೆದು, ಬೆಳಕಿನ ಒಂದೆ
ಚಿಗುರೊಡೆದು ಅಂಗಾಂಗ ತುಂಬಬೇಕು.
ಏನೆ ಕೇಳಲಿ ಕರ್ಣ, ಏನೆ ಅನ್ನಲಿ ಬಾಯಿ
ಹರಿನಾಮವೆಂದು ಮನ ನಂಬಬೇಕು.

ಬೇರೆ ಸ್ಮಾರಕ ಬೇಕೆ ಇವರಂಥ ಭಕ್ತರಿಗೆ,
ಎಲ್ಲರನ್ನೂ ಸೇರಿದಂಥವರಿಗೆ
ಬೇರೆ ಬಣ್ಣನೆ ಯಾಕೆ ಈ ಇಂಥ ಮುಕ್ತರಿಗೆ?
ಎಲ್ಲವನ್ನೂ ಮೀರಿ ನಿಂತವರಿಗೆ?

–ಕೆ.ಎಸ್. ನಿಸಾರ್ ಅಹಮದ್

ನಿಮ್ಮೊಂದಿಗೆ

ಫೆಬ್ರವರಿ ಮಾಹೆಯ ಈ ಸಂಚಿಕೆಯನ್ನು ತಮ್ಮ ಕೈಗಿಡಲು ಸಂತೋಷವೆನಿಸುತ್ತಿದೆ. ಈ ಸಂಚಿಕೆ ವಿಷಯಾಧಾರಿತವಾಗಿ ಈ ಬಾರಿ 'ಜಾತ್ಯತೀತತೆ' ಯ ಸುತ್ತಲು ರೂಪುಗೊಂಡಿದೆ. ಇದಕ್ಕೆ ಪರೋಕ್ಷವಾಗಿ ಕಾರಣರಾದವರು ನಮ್ಮ ಒಬ್ಬ ಮಂತ್ರಿ ಮಹೋದಯರು. ಅವರು ಆಡಿದ ಮಾತು ಈ ದೇಶದ ಪ್ರಜ್ಞಾವಂತ ನಾಗರಿಕರಿಗೆಲ್ಲ ಬೇಸರ ಮತ್ತು ಅವಮಾನವನ್ನು ಉಂಟು ಮಾಡಿದೆ. ಅದೇನೆ ಇರಲಿ ಜಾತ್ಯತೀತತೆಯ ಬಗ್ಗೆ ದೇಶದಾದ್ಯಂತ ಚರ್ಚೆಯಾಗಲು ಮತ್ತು ಆ ಸಿದ್ಧಾಂತವನ್ನು ಮತ್ತಷ್ಟು ಗಟ್ಟಿಗೊಳಿಸಲು ಆ ಮಂತ್ರಿಗಳ ಬೇಜವಾಬ್ದಾರಿ ಮಾತು ದಾರಿಮಾಡಿಕೊಟ್ಟಿದೆ.

ಜಾತ್ಯತೀತತೆಯ ಕುರಿತು ಬರಹವನ್ನು ವಿನಂತಿಸಿದ ಕೂಡಲೆ ಸಮಾನಮನಸ್ಕರು ಅದಕ್ಕೆ ಸ್ಪಂದಿಸಿ ಲೇಖನಗಳನ್ನು ಕಳುಹಿಸಿದ್ದಾರೆ. ನಮ್ಮ ನಿರೀಕ್ಷೆಗೂ ಮೀರಿ ಪತ್ರಿಕೆಯು ವಿಚಾರಪೂರ್ಣವಾಗಿ ಹೊರಬಂದಿದೆ. ಹಾಗಾಗಿ ಈ ಸಂಚಿಕೆಯ ಲೇಖಕರಿಗೆಲ್ಲಾ ವಂದನೆಗಳನ್ನು ಸಲ್ಲಿಸುತ್ತೇವೆ.

ಈ ದೇಶದ ಬಹುತ್ವವನ್ನು ಕಾಪಾಡುವುದು ಮತ್ತು ಸಹಿಷ್ಣುತೆಯನ್ನು ರೂಢಿಸಿಕೊಳ್ಳುವುದರ ಮೂಲಕ ಈ ದೇಶದ ಬಹು ದೊಡ್ಡ ಪರಂಪರೆಯನ್ನು ಕಾಯುವುದು ಬಹಳ ಮುಖ್ಯ ಎಂಬುದು ಎಲ್ಲ ಲೇಖಕರ ಅಭಿಪ್ರಾಯವಾಗಿದೆ. ಜೆ ಪಿ ಯವರು ತಮ್ಮ ಲೇಖನದಲ್ಲಿ ಬರೆದಿರುವಂತೆ ಈ ದೇಶದ ಏಕತೆಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದೇ ವ್ಯಕ್ತಿಗತ ನೆಲೆಯಲ್ಲಿ ಬೌದ್ಧಿಕ ಮತ್ತು ಆಧ್ಯಾತ್ಮಿಕ ಉನ್ನತಿಯ ಪ್ರಕ್ರಿಯೆ ಎಂಬುದನ್ನು ಎಲ್ಲರೂ ಮನಗಾಣಬೇಕು.

ಜನಪದ ವಿಚಾರವು ಹೊಸ ರೂಪ ಪಡೆಯುತ್ತಿರುವುದನ್ನು ಗಮನಿಸಿ ಅನೇಕ ಓದುಗರು ಸಂತಸ ವ್ಯಕ್ತಪಡಿಸಿದ್ದಾರೆ. ಅವರೆಲ್ಲರಿಗೂ ವಂದನೆಗಳು. ಮುಂದಿನ ದಿನಗಳಲ್ಲಿ ನಿಮ್ಮೆಲ್ಲರ ಸಹಕಾರದಿಂದ ಜನಪದ ವಿಚಾರವು ಇನ್ನೂ ಅರ್ಥಪೂರ್ಣವಾಗಿ ಹೊರಬರುತ್ತದೆಂಬ ಭರವಸೆ ನಮಗಿದೆ.

ವಂದನೆಗಳು.

ಭಾರತದಲ್ಲಿ ಜಾತಿ ಮತ್ತು ಜಾತ್ಯತೀತತೆ ಕಲ್ಪನೆಗಳ ಸ್ಥೂಲ ಅವಲೋಕನ

- ಎನ್. ಶ್ರೀನಿವಾಸ ಉಡುಪ

ವೇದಕಾಲೀನ ಭಾರತದಲ್ಲಿ 'ಜಾತಿ' ಎಂಬ ಪದದ ಬಳಕೆ ಇರಲಿಲ್ಲ. ಅತ್ಯಂತ ಪ್ರಾಚೀನ ವಾಙ್ಮಯವೆನ್ನಲಾಗಿರುವ ಋಗ್ವೇದದಲ್ಲಿ ಬರುವ ಪುರುಷಸೂಕ್ತದಲ್ಲಿ ನಾಲ್ಕು ವರ್ಣಗಳ ಪ್ರಸ್ತಾಪವಿದೆ. ವಿರಾಟ್‌ಪುರುಷನ ಮುಖದಲ್ಲಿ ಬ್ರಾಹ್ಮಣನೂ, ತೋಳುಗಳಲ್ಲಿ ಕ್ಷತ್ರಿಯನೂ, ತೊಡೆಯಲ್ಲಿ ವೈಶ್ಯನೂ, ಕಾಲುಗಳಲ್ಲಿ ಶೂದ್ರನೂ ಹುಟ್ಟಿದರೆಂಬ ಮಾತು ಅಲ್ಲಿ ಬರುತ್ತದೆ. ಹೀಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ ಎಂಬ ನಾಲ್ಕು ಗುಂಪುಗಳಲ್ಲಿ ಮನುಷ್ಯಕುಲವನ್ನು ವಿಂಗಡಿಸುವ ಪುರುಷಸೂಕ್ತ ಮನುಷ್ಯ ನಿರ್ವಹಿಸಬೇಕಾದ ಕರ್ತವ್ಯಗಳನ್ನು ದೃಷ್ಟಿಯಲ್ಲಿರಿಸಿಕೊಂಡು, ಪಂಗಡಗಳನ್ನು ಗುರುತಿಸುತ್ತದೆ. ಈ ನಾಲ್ಕು ಪಂಗಡಗಳೇ ನಾಲ್ಕು ವರ್ಣಗಳೆನ್ನಿಸಿಕೊಂಡವು. ಆದರೆ ಈ ವರ್ಣ-ವಿಂಗಡಣೆಯಲ್ಲಿ ಉಚ್ಚ-ನೀಚ ಎಂಬ ಸ್ತರವ್ಯತ್ಯಾಸಗಳಿರಲಿಲ್ಲ. ('ಗುಣಕರ್ಮಗಳಿಗನುಸಾರವಾಗಿ ಚತುರ್ವರ್ಣಗಳು ನನ್ನಿಂದಲೇ ಸೃಷ್ಟಿಯಾಗಿವೆ' ಎಂಬ ಭಗವದ್ಗೀತೆಯಲ್ಲಿನ ಶ್ರೀಕೃಷ್ಣನ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು.) ಜ್ಞಾನಿಯಾಗಿ, ಸ್ವಾಧ್ಯಾಯ-ಪ್ರವಚನಗಳಲ್ಲಿ ನಿರತನಾಗಿ, ಸಹಜೀವಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದ ವ್ಯಕ್ತಿ 'ಬ್ರಾಹ್ಮಣ'ನೆನ್ನಿಸಿಕೊಂಡ. ಅಧ್ಯಯನ ಹಾಗೂ ಪ್ರವಚನಗಳಿಗೆ ಅವಶ್ಯವಿರುವ ಕಣ್ಣುಗಳು ಮತ್ತು ಬಾಯಿ ಮುಖದಲ್ಲಿರುವುದರಿಂದ ವಿರಾಟ್‌ಪುರುಷನ ಮುಖದಲ್ಲಿ ಬ್ರಾಹ್ಮಣನೂ, ಶತ್ರುಗಳಿಂದ ಸಮುದಾಯವನ್ನು ರಕ್ಷಿಸಲು ತೋಳ್ಬಲವನ್ನೇ ಆಶ್ರಯಿಸಿದ್ದ ಕ್ಷತ್ರಿಯನು ವಿರಾಟ್‌ಪುರುಷನ ತೋಳುಗಳಲ್ಲಿ ಜನಿಸಿದರೆಂಬುದು ಪುರುಷಸೂಕ್ತದ ಧ್ವನಿತಾರ್ಥ. ಹಾಗೆಯೇ ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿಕೊಂಡಿದ್ದ ವೈಶ್ಯ ಬಹಳ ಸಮಯ ಕುಳಿತೇ ಕಾರ್ಯ ನಿರ್ವಹಿಸಬೇಕಾಗಿದ್ದುದರಿಂದ ಆತನ ತೊಡೆಗಳು ಸದೃಢವಾಗಿರಬೇಕಾದದ್ದು ಅನಿವಾರ್ಯ. ಆದ್ದರಿಂದಲೇ ಪುರುಷಸೂಕ್ತ ವೈಶ್ಯನ ಜನನ ವಿರಾಟ್‌ಪುರುಷನ ತೊಡೆಯಲ್ಲಿ ಎಂದಿತು. ಇನ್ನು ದೈಹಿಕ ಶ್ರಮವನ್ನೇ ಬಳಸಿಕೊಂಡು ದುಡಿದು, ಸಮುದಾಯಕ್ಕೆ ಅಗತ್ಯವಾಗಿದ್ದ ಸೇವೆಯನ್ನು ಒದಗಿಸುತ್ತಿದ್ದ ಶೂದ್ರ ವಿರಾಟ್‌ಪುರುಷನ ಕಾಲುಗಳಲ್ಲಿ ಹುಟ್ಟಿದ ಎನ್ನುತ್ತದೆ ಪುರುಷಸೂಕ್ತ. ಈ ರೀತಿಯ ವರ್ಣವಿಭಜನೆಯ ಹಿನ್ನೆಲೆಯಲ್ಲಿ ಲೋಕವ್ಯಾಪಾರವನ್ನು ವ್ಯವಸ್ಥಿತವಾಗಿ ನಡೆಸುವ ನಾಲ್ಕು ಗುಂಪುಗಳ ಪ್ರಸ್ತಾಪವಿದೆಯೇ ವಿನಾ, ವಿರಾಟ್‌ಪುರುಷನ ಮುಖದಲ್ಲಿ ಜನಿಸಿದ ಬ್ರಾಹ್ಮಣ ಶ್ರೇಷ್ಠನೆಂದಾಗಲೀ, ಕಾಲುಗಳಲ್ಲಿ ಜನಿಸಿದ ಶೂದ್ರ ನಿಕೃಷ್ಟನೆಂದಾಗಲೀ – ಈಗಿನಂತೆ ತಾರತಮ್ಯಸೂಚಕವಾದ – 'ಜಾತಿ' ಎಂಬ ಧ್ವನಿಯಿರಲಿಲ್ಲ.

ಪ್ರಾಚೀನ ಆರ್ಯರು ರೂಪಿಸಿದ ಈ ವರ್ಣವಿಭಾಗಗಳು ವ್ಯಕ್ತಿ-ವ್ಯಕ್ತಿಗಳು ತಮ್ಮ ತಮ್ಮ ವರ್ಣಗಳಿಗೇ ಸೀಮಿತವಾಗಿ ಬದುಕಬೇಕೆನ್ನುವಷ್ಟು ಬಿಗಿಯಾದ (rigid) ವ್ಯವಸ್ಥೆಯಾಗಿರಲಿಲ್ಲ. ಒಂದು ವರ್ಣಕ್ಕೆ ಸೇರಿದ್ದ ಒಬ್ಬಾತ ಸೂಕ್ತ ಅರ್ಹತೆಯನ್ನು ಸಾಧನೆಯಿಂದ ಗಳಿಸಿಕೊಂಡರೆ ಇನ್ನೊಂದು ವರ್ಣಕ್ಕೆ ಸೇರ್ಪಡೆಯಾಗಬಹುದಾದಷ್ಟು ನಮ್ಯಗುಣ (flexibility) ಅಂಥ ವ್ಯವಸ್ಥೆಯಲ್ಲಿತ್ತು. ಈ ಕುರಿತು ಪ್ರಾಚೀನ ಭಾರತದ ಕಾವ್ಯ, ಪುರಾಣಗಳಲ್ಲಿ ಉದಾಹರಣೆಗಳು ಸಿಕ್ಕುತ್ತವೆ. ಹುಟ್ಟಿನಿಂದ ವ್ಯಾಧನಾಗಿದ್ದ ವಾಲ್ಮೀಕಿ, ಕ್ರಾಂತದರ್ಶಿಯಾದ ಕವಿಯಾಗಿ,

ರಾಮಾಯಣದಂಥ ಚಿರಕೃತಿಯನ್ನು ರಚಿಸಿ, ಎಲ್ಲರಿಂದಲೂ ಗೌರವಿಸಲ್ಪಟ್ಟ. ಕ್ಷತ್ರಿಯ ವರ್ಣದಲ್ಲಿ ಜನಿಸಿದ್ದ ವಿಶ್ವಾಮಿತ್ರ ತಪಸ್ಸಿನಿಂದ ಬ್ರಹ್ಮರ್ಷಿಯಾಗಿ, ಬ್ರಾಹ್ಮಣ ವರ್ಣಕ್ಕೆ ಸೇರ್ಪಡೆಯಾದ. ಇವು ಕೆಲವು ಉದಾಹರಣೆಗಳು ಮಾತ್ರ. ಕಾಲಕ್ರಮೇಣ ಈ ನಾಲ್ಕು ವರ್ಣಗಳ ನಡುವೆ ಉಚ್ಚ-ನೀಚ ಸ್ತರವ್ಯತ್ಯಾಸ ಕಾಣಿಸಿಕೊಂಡಾಗಲೂ, ಅದನ್ನು ಮೀರಿ, ವ್ಯಕ್ತಿಯ ಯೋಗ್ಯತೆಯನ್ನು ಗುರುತಿಸಿ, ಗೌರವಿಸುವ ವಿಶಾಲ ಮನೋಭಾವವೂ ಭಾರತದಲ್ಲಿತ್ತು. ಮಹಾಭಾರತದಲ್ಲಿ ಪ್ರಸ್ತಾಪಿತವಾಗಿರುವ 'ಧರ್ಮವ್ಯಾಧನ ಕಥೆ'ಯೇ ಇದಕ್ಕೆ ಸಾಕ್ಷಿ. ಎಂಟನೆಯ ಶತಮಾನದಲ್ಲಿದ್ದ ಮಹಾಜ್ಞಾನಿಗಳಾಗಿದ್ದ ಶಂಕರಾಚಾರ್ಯರು "ಚಂಡಾಲೋಽಸ್ತು ಸ ತು ದ್ವಿಜೋಽಸ್ತುಗುರುರಿತ್ಯೇಷಾ ಮನೀಷಾ ಮಮ" (ಜ್ಞಾನಸಂಪನ್ನನಾದ ವ್ಯಕ್ತಿ ಚಂಡಾಲನಾಗಿರಲಿ, ಬ್ರಾಹ್ಮಣನಾಗಿರಲಿ ಆತ ನನ್ನ ಗುರು) ಎಂದು ಘೋಷಿಸಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಪ್ರಾಚೀನ ಭಾರತದ ಧರ್ಮಶಾಸ್ತ್ರಗಳನ್ನು ನಿರೂಪಿಸುವ ಸ್ಮೃತಿಗ್ರಂಥಗಳಲ್ಲಿ ಪ್ರಧಾನವೆನ್ನಿಸಿಕೊಂಡ ಮನುಸ್ಮೃತಿಯಲ್ಲಿ ಚತುರ್ವರ್ಣದವರೆಲ್ಲರೂ ಸಮಾನರು ಎಂದೇ ಪರಿಗಣಿಸಲಾಗಿತ್ತು. ಮೇಲ್ವರ್ಗಕ್ಕೆ ಸೇರಿದ ಬ್ರಾಹ್ಮಣನಿಗೆ ಅತಿ ಕಠಿಣವಾದ ಕರ್ತವ್ಯ-ನಿಯಮಗಳನ್ನು ವಿಧಿಸಲಾಗಿತ್ತು. ಕ್ಷತ್ರಿಯ, ವೈಶ್ಯ, ಶೂದ್ರ ವರ್ಣಗಳಲ್ಲಿನ ವ್ಯಕ್ತಿಗಳ ಯೋಗ್ಯತೆಗಳನ್ನು ಗುರುತಿಸಿ, ಗೌರವಿಸಲಾಗುತ್ತಿತ್ತು. ಉದಾಹರಣೆಗೆ ಆ ಕಾಲಘಟ್ಟದಲ್ಲಿ, ಕ್ಷತ್ರಿಯನಾದ ಜನಕನನ್ನು ರಾಜರ್ಷಿಯೆಂದೂ, ಜ್ಞಾನಿಯೆಂದೂ ಬ್ರಾಹ್ಮಣ ಋಷಿಗಳು ಪೂಜ್ಯಭಾವದಿಂದ ಕಾಣುತ್ತಿದ್ದರು. ದಾಸೀಪುತ್ರನಾದ ವಿದುರನನ್ನು ಭಗವಂತನ ಅವತಾರವೆಂದು ಭಾವಿಸಲಾದ ಶ್ರೀಕೃಷ್ಣನೇ ಗೌರವಿಸುತ್ತಿದ್ದನೆಂಬುದನ್ನು ಮಹಾಭಾರತದಲ್ಲಿ ಕಾಣುತ್ತೇವೆ. ಪುರಾಣ-ಇತಿಹಾಸ ಕಾಲದಲ್ಲಿ ಶೂದ್ರವರ್ಣದ ಬ್ರಹ್ಮಜ್ಞಾನಿಗಳಿಗೆ, ಮಧ್ಯಕಾಲದಲ್ಲಿ ಕೆಳಗಿನ ವರ್ಣದ ಸಂತರಿಗೆ ಮೇಲ್ವರ್ಗದ ಜನರು ಮನ್ನಣೆ ನೀಡಿ ಆದರಿಸುತ್ತಿದ್ದರು. ಹುಟ್ಟಿನಿಂದ ಕ್ಷತ್ರಿಯರಾಗಿದ್ದ ಶ್ರೀರಾಮ ಹಾಗೂ ಶ್ರೀಕೃಷ್ಣ ದೇವರೆಂದು ಈಗಲೂ ಆರಾಧಿಸಲ್ಪಡುಘತ್ತಿದ್ದಾರೆ.

ಆದರೆ ಕರ್ತವ್ಯ, ಕರ್ಮ, ಗುಣಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಮಾಡಲಾಗಿದ್ದ ವರ್ಣವಿಭಜನೆಗಳಲ್ಲಿ ಮೇಲು-ಕೀಳು ಎಂಬ ತರತಮಭಾವ ಕಾಣಿಸಿಕೊಂಡಿದ್ದು ಒಂದು ವಿಪರ್ಯಾಸ. ಇದರಿಂದಾಗಿ ಕ್ರಮೇಣ ಭಾರತೀಯ ಸಮಾಜ ಶ್ರೇಣೀಕೃತ ಸಮಾಜವಾಗಿ ರೂಪುಗೊಳ್ಳುವಂತಾಯಿತು. ವರ್ಣಗಳಲ್ಲಿ ಅಥವಾ ಪಂಗಡಗಳಲ್ಲಿಯ ಸಂಬಂಧಗಳು ಆಯಾ ವರ್ಣ ಅಥವಾ ಪಂಗಡಗಳ ಕಟ್ಟಳೆಗಳಿಗೆ ಒಳಪಡುವಂತಾಯಿತು. ವಿವಾಹಸಂಬಂಧಗಳು ಪಂಗಡಗಳ ಗಡಿಯನ್ನು ಮೀರುವುದು ನಿಷಿದ್ಧವೆಂಬ ಭಾವನೆಗೆ ಚಲಾವಣೆ ದೊರೆಯಿತು. ಉಚ್ಚವರ್ಣದ ಜನ ಕೆಳಗಿನ ವರ್ಣದವರೊಂದಿಗೆ ಸಹಭೋಜನ ಮಾಡುವುದನ್ನೂ ನಿಷೇಧಿಸಲಾಯಿತು. ನಿರ್ದಿಷ್ಟ ಪಂಗಡದವರು ತಮಗೆ ಮೀಸಲಾದ ನಿರ್ದಿಷ್ಟ ವೃತ್ತಿಗಳಿಂದಲೇ ಜೀವನ ಮಾಡಬೇಕೆಂಬ ಕಟ್ಟಳೆ ಬಿಗಿಯಾಯಿತು. ಹೀಗೆ ವರ್ಣಕಲ್ಪನೆ ಜಾತಿಗಳ ಹುಟ್ಟುವಿಕೆಗೆ ಕಾರಣವಾಯಿತು. ವರ್ಣ-ವರ್ಣಗಳಲ್ಲಿ ಅಂತರ್‌ವರ್ಣಗಳು ಹುಟ್ಟಿಕೊಂಡವು. ಅವುಗಳಲ್ಲಿಯೂ ಅಂತರ್-ಪಂಗಡಗಳು ಕಾಣಿಸಿಕೊಂಡವು. ಹೀಗಾಗಿ ಪ್ರಸ್ತುತ ಭಾರತದಲ್ಲಿ ಮೂರು ಸಾವಿರಕ್ಕೂ ಹೆಚ್ಚು ಜಾತಿಗಳಿರುವುದನ್ನು ತಜ್ಞರು ಗುರುತಿಸಿದ್ದಾರೆ.

೧೬ನೆಯ ಶತಮಾನದಲ್ಲಿ ಭಾರತಕ್ಕೆ ಬಂದ ಪೋರ್ಚುಗೀಸರು ಹಿಂದೂ ಸಾಮಾಜಿಕ

ಪದ್ಧತಿಯನ್ನು ಗಮನಿಸಿದರು. ಇಲ್ಲಿನ ಸಮಾಜದ ಒಳಗುಂಪುಗಳನ್ನು ಕಂಡ ಅವರು ಆ ಗುಂಪುಗಳನ್ನು ತಮ್ಮ ಭಾಷೆಯಲ್ಲಿ 'ಕಾಸ್ಟಾಜ್' (castas) ಎಂದು ಕರೆದರು. ಈ ಪದವೇ ಈಗ ನಾವು ಬಳಸುವ 'ಕಾಸ್ಟ್' (caste) ಎಂಬುದರ ಹುಟ್ಟಿಗೆ ಕಾರಣವಾಯಿತು. ಈಗ ಭಾರತೀಯರ ಪಾಲಿಗೆ ಅಗತ್ಯವಾಗಿರುವ ಎಲ್ಲ ದಾಖಲೆಗಳಲ್ಲೂಮತ ಮತ್ತು ಜಾತಿ (religion and caste)ಗಳ ಉಲ್ಲೇಖ ಕಡ್ಡಾಯವಾಗಿದೆ. 'ಜಾತಿ' ಎಂಬ ಪರಿಕಲ್ಪನೆ ನಮ್ಮಲ್ಲಿ ಎಷ್ಟೊಂದು ದೃಢವಾಗಿ ಬೆಳೆದಿದೆ ಎಂಬುದಕ್ಕೆ ಇದು ಸಾಕ್ಷಿ ಹೇಳುತ್ತದೆ.

ಜಾತಿಪದ್ಧತಿಯ ಬಿಗಿ ಹಿಡಿತದಿಂದಾಗಿ ಇಂದಿಗೂ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಬ್ರಾಹ್ಮಣರ ಕೇರಿ, ಕೃಷಿಕರ ಕೇರಿ, ನೇಕಾರರ ಕೇರಿ, ಕುಂಬಾರರ ಕೇರಿ, ಅಂತ್ಯಜರ ಕೇರಿ – ಹೀಗೆ ಬೇರೆ ಬೇರೆ ಜಾತಿ–ವೃತ್ತಿಗಳಿಗೆ ಅನುಸಾರವಾಗಿ ಮೀಸಲಾದ ಕೇರಿಗಳನ್ನು ಕಾಣಬಹುದಾಗಿದೆ. ಪ್ರಾಚೀನ ಭಾರತದಲ್ಲಿ ಗುಣ–ಕರ್ಮಗಳಿಗನುಗುಣವಾಗಿ ವ್ಯಕ್ತಿಯನ್ನು ಗುರುತಿಸುತ್ತಿದ್ದರು. ಆದರೆ ಜಾತಿ ಪರಿಕಲ್ಪನೆಯಿಂದಾಗಿ, ಹುಟ್ಟಿನಿಂದಲೇ ಆ ವ್ಯಕ್ತಿಯನ್ನು ಗುರುತಿಸುವ ಪರಿಪಾಠ ಪ್ರಾರಂಭವಾಯಿತು. ಎಷ್ಟೇ ಜ್ಞಾನಿಯಾಗಿದ್ದರೂ, ಸತ್ವಗುಣ ಸಂಪನ್ನನಾಗಿದ್ದರೂ ಶೂದ್ರನ ಮಗ ಶೂದ್ರನೇ; ಯಾವ ಯೋಗ್ಯತೆಯಿಲ್ಲದಿದ್ದರೂ, ಎಂಥದೇ ನೀಚ ಕೆಲಸದಲ್ಲಿ ತೊಡಗಿಕೊಂಡಿದ್ದರೂ ಬ್ರಾಹ್ಮಣಕುಲದಲ್ಲಿ ಹುಟ್ಟಿದವನು ಬ್ರಾಹ್ಮಣನೇ. ಈ ಮನೋಧರ್ಮ ಬೆಳೆಯುತ್ತಾ ಭಾರತದಲ್ಲಿ ಸಾಮಾಜಿಕ ವಿಪ್ಲವಗಳನ್ನೇ ಹುಟ್ಟುಹಾಕಿತು.

ಸಮಾಜದ ಸಾಮರಸ್ಯಕ್ಕೆ ಕಾರಣವಾಗಿದ್ದ ವರ್ಣ–ವಿಂಗಡಣೆ ವಿಚ್ಛಿದ್ರಗೊಳ್ಳುತ್ತಾ, ಜನ್ಮದಿಂದಲೇ ಮನುಷ್ಯನ ಜಾತಿ ಎಂಬ ಹಂತವನ್ನು ತಲುಪಿದಾಗ ಭಾರತದ ಸಾಮಾಜಿಕ ಜೀವನದಲ್ಲಿ ಸಹಜವಾಗಿಯೇ ಕ್ಷೋಭೆ ಹೊಗೆಯಾಡತೊಡಗಿತು. ಮೇಲ್ವರ್ಗದವರೆಂದು ಹಿರಿಮೆಯಿಂದ ಮೆರೆಯುತ್ತಿದ್ದ ಮಂದಿ ಕೆಳವರ್ಗದವರನ್ನು ಹೀನಾಯವಾಗಿ ಕಾಣತೊಡಗಿದರು; ಮಾತ್ರವಲ್ಲ, ಹಲವಾರು ರೀತಿಯಲ್ಲಿ ಅವರನ್ನು ಶೋಷಿಸತೊಡಗಿದರು. ಪುರೋಹಿತಶಾಹಿ ಉದ್ಭವಿಸಿ, ಅಮಾಯಕರಲ್ಲಿ ಮೌಢ್ಯವನ್ನು ಬಿತ್ತಿ, ಅದರಿಂದ ಲಾಭವನ್ನು ಪಡೆಯುವ ಹುನ್ನಾರವೂ ಪ್ರಾರಂಭವಾಯಿತು. ಕ್ರಿಯೆಗೆ ತಕ್ಕ ಪ್ರತಿಕ್ರಿಯೆಯಿರುವಂತೆ, ಶೋಷಣೆಯ ವಿರುದ್ಧ ಪ್ರತಿಭಟನೆಯೂ ಕಾಣಿಸಲಾರಂಭಿಸಿತು. ಜಾತಿ–ಜಾತಿಗಳ ನಡುವೆ ತಿಕ್ಕಾಟ, ವೈಮನಸ್ಯ ಮುಂತಾದವುಗಳು ಉದ್ಭವಿಸಿ, ಸಮಾಜದಲ್ಲಿ ಸಾಮರಸ್ಯ ಕದಡಿ ವಿರಸಕ್ಕೆ ಅವಕಾಶವಾಯಿತು. ಈ ಕದಡಿದ ವಾತಾವರಣವನ್ನು ಗಮನಿಸಿದ ಹಲವು ಚಿಂತಕರು, ಸುಧಾರಕರು ಜಾತ್ಯತೀತ ಮನೋಭಾವವನ್ನು ಸಮಾಜದಲ್ಲಿ ಹುಟ್ಟುಹಾಕಲು ಪ್ರಾಮಾಣಿಕವಾಗಿ ಪ್ರಯತ್ನಿಸಿದರು.

ಜಾತಿ–ಜಾತಿಗಳ ನಡುವಣ ಶ್ರೇಷ್ಠ–ನಿಕೃಷ್ಟ ಭಾವನೆಯನ್ನು ತೊಡೆದುಹಾಕುವ ಪ್ರಯತ್ನದಲ್ಲಿ ಭಾರತದಲ್ಲಿ ಹುಟ್ಟಿಕೊಂಡ ಭಕ್ತಿಪಂಥದ ಕಾಣಿಕೆ ಬಹಳ ದೊಡ್ಡದು. ಕಬೀರ, ರಮಾನಂದ, ನಾನಕ್ ಮುಂತಾದವರು ಮನುಷ್ಯನಿಗೆ ಜಾತಿ ಮುಖ್ಯವಲ್ಲವೆಂದೂ, ನಿರ್ಮಲವಾದ ಮನಸ್ಸು ಹಾಗೂ ಪರಿಶುದ್ಧ ಆಚಾರವಿರುವ ವ್ಯಕ್ತಿ ಯಾವುದೇ ಜಾತಿಯವನಾಗಿದ್ದರೂ ಶ್ರೇಷ್ಠನೆಂದೂ ಪರಿಗಣಿಸಿದರು. ಬಂಗಾಲದ ಚೈತನ್ಯಪಂಥದವರೂ ನಿಜವಾದ ಭಕ್ತ ಜಾತ್ಯತೀತನೆಂದು ಭಾವಿಸಿ, ಗೌರವಿಸಿದರು. ವೃತ್ತಿಯಲ್ಲಿ ಕುಂಬಾರನಾಗಿದ್ದ ಗೋರ ಕುಂಬಾರ ಅಚಂಚಲವಾದ ವಿಟ್ಠಲಭಕ್ತಿಯಿಂದ 'ಭಕ್ತ ಕುಂಬಾರ'ನೆಂದು ಮನ್ನಣೆ ಪಡೆದ. ಇಂಥ ಅನೇಕ ಉದಾಹರಣೆಗಳು

ಭಾರತದ ಭಕ್ತಿಪಂಥದ ಚರಿತ್ರೆಯುದ್ದಕ್ಕೂ ಕಾಣಬರುತ್ತವೆ. ವಿಶಿಷ್ಟಾದ್ವೈತ ಪರಂಪರೆಗೆ ಸೇರಿದ್ದ ದಕ್ಷಿಣ ಭಾರತದ ಆಳ್ವಾರರು ಜಾತಿ-ಪಂಥಗಳ ಬಿಕ್ಕಟ್ಟನ್ನು ಸಡಿಲಿಸಿ, ಉದಾರ ಮನೋಧರ್ಮವನ್ನು ಬೆಳೆಸಿದರು. ಹುಟ್ಟಿನಿಂದ ಹರಿಜನನಾಗಿದ್ದ ತಿರುಪಾಣಿಯನ್ನು ಶ್ರೀವೈಷ್ಣವರು ತಮ್ಮ ಆಳ್ವಾರರಲ್ಲಿ ಒಬ್ಬನೆಂದು ಭಾವಿಸಿ ಗೌರವಿಸಿದರು. ಶ್ರೀ ರಾಮಾನುಜರು ಮೇಲುಕೋಟೆಯಲ್ಲಿ ಹರಿಜನರಿಗೆ ದೇವಾಲಯ ಪ್ರವೇಶಕ್ಕೆ ಅವಕಾಶ ಕಲ್ಪಿಸಿದರು. ತಮಿಳುನಾಡಿನ ಮಹಾಜ್ಞಾನಿಗಳಲ್ಲಿ ಒಬ್ಬರಾಗಿದ್ದ ಮಣಿವಾಳ ಮುನಿಗಳು - "ಶೂದ್ರಂ ವಾ ಭಗವದ್ಭಕ್ತಂ ನಿಷಾದಂ ಶ್ವಪಚಂ ತಥಾ । ವೀಕ್ಷತೇ ಜಾತಿ ಸಾಮಾನ್ಯಾತ್ ಸ ಯಾತಿ ನರಕಂ ನರಃ" (ಭಕ್ತನು ಶ್ವಪಚನಾದರೂ, ನಿಷಾದನಾದರೂ ಅವನು ನಮಗೆ ಪೂಜ್ಯನು. ಅವನನ್ನುಜಾತಿಭಾವನೆಯಿಂದ ನೋಡಿದಾತ ನರಕಕ್ಕೆ ಹೋಗುತ್ತಾನೆ) ಎನ್ನುವ ಪುರಾಣವಚನಗಳನ್ನು ದೃಢವಾಗಿ ಬೆಂಬಲಿಸಿದರು. ವೀರಶೈವ ಧರ್ಮದ ಪ್ರವರ್ತಕರಾದ ಬಸವಣ್ಣನವರು ಜಾತಿಗಳ ಗೋಡೆಗಳನ್ನು ನಿರ್ಮೂಲ ಮಾಡಲು ತ್ರಿಕರಣಪೂರ್ವಕವಾಗಿ ಶ್ರಮಿಸಿದರು; ಶಿವಶರಣರಿಗೆ ಜಾತಿಯ ಹಂಗಿಲ್ಲವೆಂದು ಪ್ರಾಯೋಗಿಕವಾಗಿ ತೋರಿಸಿದರು. ಮಡಿವಾಳ ಮಾಚಯ್ಯ, ಮಾದಾರ ಹರಳಯ್ಯ, ಕುಂಬಾರ ಗುಂಡಯ್ಯ, ಹಡಪದ ಅಪ್ಪಣ್ಣ - ಇಂಥ ಹಲವಾರು ಮಂದಿ, ಬಸವಣ್ಣನವರಿಂದ ಶರಣದೀಕ್ಷೆಯನ್ನು ಪಡೆದು, ಜಾತಿಯ ಮೈಲಿಗೆಯನ್ನು ತೊಳೆದುಕೊಂಡರು. ರಾಘವಾಂಕ ಕವಿ ಅತಿ ಕೋಪ, ಬದ್ಧದ್ವೇಷ, ಅನಿಮಿತ್ತ ವೈರವಿರುವವನು ಮಾತ್ರ ಹೊಲೆಯನೆಂದು ಘೋಷಿಸಿದನು. ಅವಧೂತ ಕವಿ ಸರ್ವಜ್ಞನೂ ಈಶನಲ್ಲಿ ಭಕ್ತಿಯುಳ್ಳವ ಮಾತ್ರ ನಿಜವಾದ ಕುಲಜನೆಂದು, ಭಕ್ತಿಯಿಲ್ಲದಾತ ಯಾವ ಜಾತಿಯಲ್ಲಿ ಹುಟ್ಟಿದ್ದರೂ ಹೊಲೆಯನೆಂದು ಸಾರಿದನು.

ದಕ್ಷಿಣ ಭಾರತದಲ್ಲಿ ಹದಿನಾರನೆಯ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ದಾಸಪಂಥದ ಹರಿದಾಸರೂ ಶರಣಪಂಥದವರಂತೆಯೇ ಜಾತಿಯ ಕಾರಣದಿಂದ ಉದ್ಭವಿಸುವ ಸಾಮಾಜಿಕ ಅಸಮಾನತೆಯನ್ನು ತೀವ್ರವಾಗಿ ಖಂಡಿಸಿದರು. ಹುಟ್ಟಿನಿಂದ ಮನುಷ್ಯನಿಗೆ ಅಂಟಿಕೊಳ್ಳುವ 'ಜಾತಿ' ಎಂಬ ಉಪಾಧಿಯಿಂದಾಗಿ ಶ್ರೇಷ್ಠತೆ-ನಿಕೃಷ್ಟತೆಗಳ ನಿರ್ಧಾರವಾಗುವುದು ಅನೈಸರ್ಗಿಕ ಮತ್ತು ಅಮಾನವೀಯವೆಂದ ಹರಿದಾಸರು ತಮ್ಮ ಹಾಡುಗಳ ಮೂಲಕ ಜನಗಳ ಸಾಕ್ಷೀಪ್ರಜ್ಞೆಯನ್ನು ಎಚ್ಚರಿಸುವ ಪ್ರಯತ್ನ ಮಾಡಿದರು. "ಹೊಲೆಯ ಹೊರಗಿಹನೆ? ಊರೊಳಗಿಲ್ಲವೆ?" ಎಂದು ಪ್ರಶ್ನಿಸಿದ ಪುರಂದರದಾಸರು 'ಹೊಲೆಯ' ಎಂಬುದು ಶೀಲಸೂಚಕವೇ ಹೊರತು ಜಾತಿಸೂಚಕವಲ್ಲ ಎಂದು ಸ್ಪಷ್ಟವಾಗಿ ಹೇಳಿದರು. ಕನಕದಾಸರಂತೂ ವ್ಯಕ್ತಿ ಶ್ರೇಷ್ಠನೆನ್ನಿಸಿಕೊಳ್ಳುವುದು ಅವನ ಕುಲದಿಂದಲ್ಲ, ಅವನ ನಿರ್ಮಲ ಚಾರಿತ್ರ್ಯದಿಂದ ಎಂದು ಘೋಷಿಸುತ್ತಾ, "ಆತ್ಮನಾವ ಕುಲ? ಜೀವನಾವ ಕುಲ? ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯಾ?" ಎಂದು ಕುಲಗರ್ವಿಷ್ಠರಿಗೆ ಸವಾಲು ಹಾಕಿದರು. ಹೀಗೆ ದಕ್ಷಿಣ ಭಾರತದ ಶ್ರೀವೈಷ್ಣವರು, ವಚನಪಂಥದವರೂ, ದಾಸಪಂಥದವರೂ ಹಿಂದೂಧರ್ಮದ ಮೇಲಿನ ಕಪ್ಪುಚುಕ್ಕೆಯಂತಿದ್ದ ಜಾತಿಪದ್ಧತಿಯಲ್ಲಿನ ತಾರತಮ್ಯಗಳನ್ನು ತೊಡೆದುಹಾಕಲು ಇನ್ನಿಲ್ಲದಂತೆ ಪ್ರಯತ್ನಿಸಿದರು.

ಭಾರತದಲ್ಲಿ ಜಾತಿಪದ್ಧತಿಯ ವಿರುದ್ಧದ ಹೋರಾಟ ಅತ್ಯಂತ ಉತ್ಕಟ ಸ್ಥಿತಿಯಲ್ಲಿ ಕಾಣಿಸಿಕೊಂಡಿದ್ದುದು ೧೮ರಿಂದ ೨೦ನೇ ಶತಮಾನದ ಕಾಲಘಟ್ಟದಲ್ಲಿ. ವಂಗದೇಶದಲ್ಲಿ ಜನಿಸಿದ್ದ ರಾಜಾರಾಮ ಮೋಹನರಾಯ್ ಬ್ರಹ್ಮಸಮಾಜವನ್ನು ಸ್ಥಾಪಿಸಿ, ಜಾತಿ, ಮತ, ಜನಾಂಗ, ವರ್ಣ ಮುಂತಾದ ಬೇಧವಿಲ್ಲದ ಸಮುದಾಯವನ್ನು ಹುಟ್ಟುಹಾಕಲು ಯತ್ನಿಸಿ,

ತಕ್ಕಮಟ್ಟಿಗೆ ಯಶಸ್ವಿಯಾದರು. ಗುಜರಾತಿನವರಾದ ದಯಾನಂದ ಸರಸ್ವತಿಯವರು ಸ್ಥಾಪಿಸಿದ ಆರ್ಯಸಮಾಜವೂ ಈ ಕೆಲಸವನ್ನೇ ಮುಂದುವರೆಸಿ, ಜಾತಿ ಮತಗಳು ವೈದಿಕ ಧರ್ಮಕ್ಕೆ ವಿರೋಧವೆಂದು ಸಾರಿ, ಅಂತರ್ಜಾತೀಯ, ಅಂತರ್ಮತೀಯ ವಿವಾಹಗಳನ್ನು ಪ್ರೋತ್ಸಾಹಿಸಿತು. ಸರ್ವಧರ್ಮ ಸಮನ್ವಯಾಚಾರ್ಯರೆಂದೇ ಕರೆಯಬಹುದಾದ ಶ್ರೀರಾಮಕೃಷ್ಣ ಪರಮಹಂಸರು ಜಾತಿ-ಮತ-ಧರ್ಮಗಳಲ್ಲಿನ ಅಸಮಾನತೆಯನ್ನು ಸ್ವಾನುಭವದ ಬೆಳಕಿನಲ್ಲಿ ತೋರಿಸಿ, "ಮತಗಳೆಷ್ಟೋ ಪಥಗಳಷ್ಟು" ಎಂದು ಸಾರಿ ಹಿಂದೂ ಸಮಾಜಕ್ಕೆ ಸತ್ಯದರ್ಶನ ಮಾಡಿಸಿದರು. ಅವರ ಶಿಷ್ಯರಾದ ಸ್ವಾಮಿ ವಿವೇಕಾನಂದರೂ ಜಾತಿ ಮತ ಪಂಥಗಳ ಸಂಕುಚಿತ ಪರಿಧಿಯನ್ನು ಮೀರುವ ಉದಾರವಾದ ಸಮನ್ವಯ ಸಿದ್ಧಾಂತವನ್ನು ಪಸರಿಸಿದರು. ಕೇರಳದ ನಾರಾಯಣಗುರುಗಳೂ, ಸಂತ ಶಿಶುನಾಳ ಷರೀಫ಼ರಂಥ ಸೂಫ಼ೀ ಪಂಥದ ದಾರ್ಶನಿಕರು ಇಂಥ ಕೆಲಸವನ್ನೇ ಮುಂದುವರೆಸಿದರು. ಗಾಂಧೀಜೀ, ಅಂಬೇಡ್ಕರ್ ಮುಂತಾದ ಮಹನೀಯರು ಭಾರತೀಯ ಸಮಾಜದಲ್ಲಿನ ಜಾತಿ ಮತ ತಾರತಮ್ಯವನ್ನು ತೊಡೆದು ಹಾಕಲು ಮಾಡಿದ ಹೋರಾಟ ಎಲ್ಲರಿಗೂ ತಿಳಿದೇ ಇದೆ. "ಮನುಷ್ಯ ಜಾತಿ ತಾನೊಂದೆ..." ಎಂದು ಹತ್ತನೇ ಶತಮಾನದಲ್ಲಿಯೇ ಉದ್ಘೋಷಿಸಿದ ಕನ್ನಡದ ಆದಿಕವಿ ಪಂಪನ ಜೊತೆಗೆ ಹೊಸಗನ್ನಡ ಕವಿಗಳೂ ದನಿಗೂಡಿಸಿದರು. ಮಾಸ್ತಿಯವರು – "ಎಂದು ತಿಳಿವುದೋ ಮನುಜಕುಲ, ತಾನು ಒಂದೆಂದು..." ಎಂದು ನಿಟ್ಟುಸಿರಿನಿಂದ ಉದ್ಗರಿಸಿದರೆ, ಪುರೋಹಿತಶಾಹಿಯ ದಬ್ಬಾಳಿಕೆಯನ್ನು ತೀವ್ರವಾಗಿ ವಿರೋಧಿಸುತ್ತಿದ್ದ ಕುವೆಂಪು ಅವರು – "ಹಳೆ ಮತದ ಕೊಳೆಯೆಲ್ಲ ಹೊಸ ಮತಿಯ ಹೊಳೆಯಲ್ಲಿ ಕೊಚ್ಚಿ ಹೋಗಲಿ..." ಎಂದು ಗರ್ಜಿಸಿದರು. ಗೋಪಾಲಕೃಷ್ಣ ಅಡಿಗರು ಭಾರತೀಯರಿಗೆ – "ಜಾತಿ ಮತದ ಗುಹೆಗಳಿಂದ ಹೊರಬನ್ನಿರಿ ಬಯಲಿಗೆ..." ಎಂದು ಕರೆ ನೀಡಿದ್ದಲ್ಲದೆ "ನಾವೆಲ್ಲರು ಒಂದೆ ಜಾತಿ ಒಂದೆ ಮತ, ಒಂದೆ ಕುಲ, ನಾವು ಮನುಜರು" ಎಂದು ಪಂಪನ ಮಾತನ್ನೇ ಪುನರುಚ್ಚರಿಸಿದರು.

ಹೀಗೆ ಶತಶತಮಾನಗಳಿಂದಲೂ ಭಾರತದಲ್ಲಿ ಮತ-ಮತ, ಜಾತಿ-ಜಾತಿಗಳ ನಡುವಣ ತರತಮ ಭಾವನೆಯ ಗೋಡೆಯನ್ನು ಕೆಡವಿ, ಜಾತ್ಯತೀತತೆಯನ್ನು ಸಾಧಿಸುವ ಹೋರಾಟ ನಡೆಯುತ್ತಲೇ ಇದೆ. ಆದರೆ ಅದರಲ್ಲಿ ಪೂರ್ಣಯಶಸ್ಸು ಮಾತ್ರ ಲಭ್ಯವಾಗಿಲ್ಲ. ರಾಜಕೀಯ ಲಾಭಕ್ಕಾಗಿ ಜಾತಿ-ಜಾತಿಗಳ ನಡುವೆ ಮಧ್ಯೆ ಇನ್ನೂ ಆಳವಾದ ಕಂದಕಗಳ ನಿರ್ಮಾಣವಾಗುತ್ತಿರುವುದನ್ನು ನಾವು ಗಮನಿಸಬಹುದು. ಆರ್ಥಿಕ ಸವಲತ್ತುಗಳಿಗಾಗಿ ಜಾತಿ ಪರಿಕಲ್ಪನೆಯನ್ನು ಬಳಸಿಕೊಳ್ಳುವ ಹುನ್ನಾರವೂ ಜಾತ್ಯತೀತತೆಯ ಸಾಧನೆಗೆ ಅಡ್ಡಿಪಡಿಸುತ್ತಿದೆ. ಹೀಗಾಗಿ "ಎಂದು ತಿಳಿವುದೋ ಮನುಜಕುಲ, ತಾನು ಒಂದೆಂದು...!" ಎಂದು ಮಾಸ್ತಿಯವರೊಂದಿಗೆ ನಾವೂ ನಿಟ್ಟುಸಿರು ಬಿಡುವಂತಾಗಿದೆ! •

ಗ್ರಂಥಋಣ

ಭಾರತೀಯ ಸಂಸ್ಕೃತಿ ದರ್ಶನ – ಸಂ.– ಅ.ನ. ಕೃ

ಪ್ರಾಚೀನ ಭಾರತವೆಂಬ ಅದ್ಭುತ – (Wonder that was India - by A.L. Basham)

ಅನುವಾದ: ಡಿ.ಆರ್. ಮಿರ್ಜಿ

ಧರ್ಮಶಾಸ್ತ್ರ ಮತ್ತು ಅರ್ಥಶಾಸ್ತ್ರ – ಡಾ. ಟಿ.ವಿ. ಸತ್ಯನಾರಾಯಣ

ಆಳ್ವಾರರ ದಿವ್ಯಜೀವನ –ಡಿ. ಕೃಷ್ಣೈಯ್ಯಂಗಾರ್

ಜಾತ್ಯತೀತತೆಯ ಸವಾಲು

– ಶ್ರೀರಾಮ ಭಟ್ಟ

ಜಾತಿಯು ಜಾತ್ಯತೀತತೆಗೆ ದಾಟುವಲ್ಲಿ ಹಲವು ಸವಾಲುಗಳನ್ನು ಎದುರಿಸಬೇಕಾಗಿರುವುದು ಸಹಜ. ಮಲೆನಾಡಿನ ನುಡಿಗಟ್ಟನ್ನು ಬಳಸಿ ಹೇಳಬಹುದಾದರೆ, ಹೊಳೆ ದಾಟಲು ಸಂಕದ ಮೇಲೆ ನಡೆದಂತೆ ಇದು. ತುಸುವೆ ಸಮತೋಲನ ತಪ್ಪಿದರೂ ಹೊಳೆ ದಾಟಹೊರಟವನು ಹೊಳೆಗೇ ಬಿದ್ದು ಒದ್ದಾಡುವ ಸ್ಥಿತಿ ಇದು. ರಾಜಕೀಯ ಮತ್ತು ಮತೀಯವಾದದ ಎರಡು ಮುಂಡಿಯ ಸಂಕದ ಮೇಲೆ ಸವಾರಿ ಹೊರಟ ಜಾತ್ಯತೀತತೆ ಆಯ ತಪ್ಪಿ ಜಾತಿಯ ಬಗ್ಗಡದ ನೀರಿನ ಹೊಳೆಯಲ್ಲೇ ಬಿದ್ದು ಒದ್ದಾಡುತ್ತಿರುವುದನ್ನು ನೋಡುತ್ತಿದ್ದೇವೆ.

ನಮ್ಮದು ಬಹು ಜಾತಿಗಳ ಬಹು ಮತಗಳ ನಾಡು. ಒಟ್ಟಿನಲ್ಲಿ ಬಹುತ್ವದ ನಾಡು. 'ಮಾನವ ಜಾತಿ ತಾನೊಂದೆ ವಲಂ' ಜಾತಿ ಒಂದೇ, ಅದು ಮಾನವ ಜಾತಿ ಎನ್ನುವುದು ಸ್ವತಂತ್ರ ಭಾರತದ ಧ್ಯೇಯ. ಅದೇ ಕಾಲಕ್ಕೆ 'ಬಹುತ್ವಕ್ಕೆ ಬೇಕು ಮಣೆ ಮತ್ತು ಮನ್ನಣೆ' ಎನ್ನುವುದು ಮತ್ತೊಂದು ಪ್ರಚಲಿತ ಘೋಷವಾಕ್ಯ. ಏಕ ಬಹು ಆಗುವುದು, ಬಹು ಆದದ್ದು ಒಂದೇ ಆಗುವುದು ನಿಜವಾದ ಸವಾಲು. (ತತ್ತ್ವಶಾಸ್ತ್ರದಲ್ಲಿ ಮಾತ್ರ ಅದು ಸವಾಲಲ್ಲ, ಸ್ವರೂಪ ಮಾತ್ರ.) ಪ್ರಾಯಃ ಈ ಸವಾಲನ್ನು ಎದುರಿಸಲಿಕ್ಕಾಗಿ ೧೯೭೬ರಲ್ಲಿ ಭಾರತೀಯ ಸಂವಿಧಾನಕ್ಕೆ ೪೨ನೇ ತಿದ್ದುಪಡಿ ತಂದು 'ಸೆಕ್ಯುಲರ್' ಪದವನ್ನು ಆಶಯವಾಗಿ ಸೇರಿಸಿದ್ದಿರಬೇಕು. ಅದು ನಮ್ಮನ್ನು ದಾಟಿಸುವ ಬದಲು ಗೊಂದಲದ ಗೂಡಿಗೆ ನೂಕಿಬಿಟ್ಟಿತು.

ಸೆಕ್ಯುಲರ್ ಎಂದರೆ ಜ್ಯಾತ್ಯತೀತ, ಧರ್ಮನಿರಪೇಕ್ಷ, ಸರ್ವಸಮತೆ ಮುಂತಾಗಿ ಅರ್ಥೈಸಲಾಯಿತು. ಸೆಕ್ಯುಲರ್ ಎನ್ನುವುದು ಆಡಳಿತವನ್ನು ಚರ್ಚ್‌ನ ಹಿಡಿತದಿಂದ ತಪ್ಪಿಸಲಿಕ್ಕಾಗಿ ಬಂದ ಪರಿಕಲ್ಪನೆ; ಈ ರಿಲಿಜನ್ ಮೂಲದ ಪರಿಕಲ್ಪನೆಯು ಒಂದೇ ರಿಲಿಜನ್ ಇಲ್ಲದ ಅಥವಾ ಮೂಲದಲ್ಲಿ ರಿಲಿಜನ್ನೇ ಇಲ್ಲದ ಭಾರತಕ್ಕೆ ಸಲ್ಲದು ಎಂಬ ವಾದವೂ ಇತ್ತೀಚೆಗೆ ಕೇಳಿಬರುತ್ತಿದೆ. ಸಂವಿಧಾನದ ತಿದ್ದುಪಡಿಯಲ್ಲಿ ಸೆಕ್ಯುಲರ್ ಪದವನ್ನು ಸೇರಿಸಿದಾಗ ಭಾರತದ ಪರಿಸರಕ್ಕೆ ಅನುಗುಣವಾಗಿ ಅದನ್ನು ವಿವರಿಸಬೇಕಾದ ಅಗತ್ಯ ಇತ್ತು. ಆಡಳಿತವು ಎಲ್ಲ ಧರ್ಮಗಳನ್ನು ಸಮನಾಗಿ ನಡೆಸಿಕೊಳ್ಳುವುದೆ ಸೆಕ್ಯುಲರ್ ಎಂದೆ ಈವರೆಗೆ ಸಾಮಾನ್ಯವಾಗಿ ಅರ್ಥೈಸಲಾಗಿದೆ. ಆದರೂ ಜಾತಿ ಮತ ಮತ್ತು ಆಡಳಿತಗಳ ನಡುವೆ ಇರುವ ಸಂಬಂಧವನ್ನು ಭಾರತದ ಸಂವಿಧಾನವು ಹಾಗೂ ಅದರ ಕಾಯಿದೆಗಳು ಸ್ಪಷ್ಟವಾಗಿ ವ್ಯಾಖ್ಯಾನಿಸಿಲ್ಲ. ಆದ್ದರಿಂದಲೇ ಗೊಂದಲ ಅನಿವಾರ್ಯ. ಸೆಕ್ಯುಲರ್ ಪರಿಕಲ್ಪನೆಯು ಎಲ್ಲಿಂದಲೇ ಬಂದಿರಲಿ, ಯಾವ ಹಿನ್ನೆಲೆಯಲ್ಲೇ ರೂಪುಗೊಂಡಿರಲಿ ಅದನ್ನು ನಮ್ಮ ವರ್ತಮಾನಕ್ಕೆ, ಪರಿಸರಕ್ಕೆ ಅನುವಾಗಿ ಅಳವಡಿಸಿ ಕೊಳ್ಳುವುದು ಮುಖ್ಯ. ಅದರಿಂದೇನೂ ಹಾನಿಯಾಗದು.

ಭಾರತದ ಬಹುತ್ವದಲ್ಲಿ ಜಾತಿ ಮತ್ತು ಧರ್ಮಗಳ ಪಾಲು ದೊಡ್ಡದು. ಸೆಕ್ಯುಲರ್ ಎನ್ನುವಾಗ ಜಾತಿ ಧರ್ಮಗಳನ್ನು ಬೆರೆಸಿಯೇ ಮಾತನಾಡಲಾಗುತ್ತಿದೆ. ಸೆಕ್ಯುಲರ್ ಎಂದರೆ ಜಾತ್ಯತೀತವೆ? ಧರ್ಮಾತೀತವೆ? ಜಾತಿ ಮತ್ತು ಧರ್ಮ ಒಂದೇ ಅಲ್ಲ. ಜಾತಿ ಬೇರೆ; ಧರ್ಮ ಬೇರೆ. ಭಾರತದ ನೆಲಕ್ಕೆ ವಿದೇಶೀಯರ ಆಕ್ರಮಣವಾದ ಬಳಿಕ ಇಲ್ಲಿಯ ಮತಧರ್ಮವನ್ನು ಹಿಂದು ಎಂದು ಹೆಸರಿಸಲಾಯಿತು. ಅಂಥ ಹಿಂದು ಧರ್ಮ ಒಂದೇ ಜಾತಿಯದಲ್ಲ. ಹಿಂದು ಧರ್ಮದಲ್ಲಿ ಎಣಿಸಲಾಗದಷ್ಟು ಜಾತಿಗಳು ಉಪಜಾತಿಗಳು ಸೇರಿವೆ. ಎಷ್ಟೋ ಜಾತಿಗಳಲ್ಲಿ ಧರ್ಮಾಂತರ(ಮತಾಂತರ?)ಗೊಂಡವರಿದ್ದಾರೆ. ಇತರ ಮತಗಳಿಗೆ ಸೇರಿಕೊಂಡ ಬಳಿಕವೂ ಮೊದಲಿನ ಜಾತಿಯನ್ನು ಬಿಡಲಾಗದೆ ಎರಡೂ ಧರ್ಮಗಳ ಆಚಾರ ಪದ್ಧತಿಯನ್ನು ಮಿಶ್ರ ಮಾಡಿಕೊಂಡವರಿದ್ದಾರೆ. ಜಾತಿ ಪದ್ಧತಿಗೆ ಹೇಸಿ ಅನ್ಯ ಧರ್ಮಕ್ಕೆ ಮೊರೆ ಹೋದ ಬಳಿಕವೂ ಸವಲತ್ತಿಗಾಗಿ ಮೊದಲಿನ ಜಾತಿಗೇ ಅಂಟಿಕೊಂಡವರೂ ಇದ್ದಾರೆ. ಮೀಸಲಾತಿಯ ಸವಲತ್ತಿಗಾಗಿಯೇ ತಮ್ಮದನ್ನು ಪ್ರತ್ಯೇಕ ಧರ್ಮವೆಂದು ಸಂವಿಧಾನ ಮನ್ನಿಸಬೇಕೆಂದು ಹೋರಾಟದ ಹಾದಿ ಹಿಡಿದವರಿದ್ದಾರೆ. ಇದರಿಂದ ಒಂಭತ್ತು ಉಪಜಾತಿಗಳಗೆ ಸೌಲಭ್ಯ ಸಿಗುತ್ತದೆ ಎಂದು ಬಹಿರಂಗವಾಗಿ ಸಾರುತ್ತಲೇ, ಜಾತಿಪದ್ಧತಿಯ ನಿರ್ಮೂಲನೆಗಾಗಿ ತಮ್ಮ ಧರ್ಮ ಸ್ಥಾಪನೆಯಾಗಿದೆ ಎಂಬ ವಾದವನ್ನೂ ಮುಂದಿಡಲಾಗಿದೆ. ದೇಶದ ಎಲ್ಲೆಡೆ ಜಾತಿಯ ಹುಚ್ಚು ಹತ್ತಿಬಿಟ್ಟಿದೆ. ಸ್ವಾತಂತ್ರ್ಯ ಪೂರ್ವದಲ್ಲೆ ಕಂಡ ಕನಸು ಜ್ಯಾತ್ಯತೀತ ನವಭಾರತದ ನಿರ್ಮಾಣ. ಆದರೆ ಈ ಎಪ್ಪತ್ತು ವರ್ಷಗಳಲ್ಲಿ ಆದದ್ದೇನು! ಜಾತಿಯ ಅಮಲಿನಲ್ಲಿ ಭಾರತದ ಅಂತರಂಗ ಛಿದ್ರವಿಚ್ಛಿದ್ರ! ಇವೆಲ್ಲಕ್ಕೆ ಮುಖ್ಯ ಕಾರಣ ಆಡಳಿತ ಅರ್ಥಾತ್ ರಾಜಕಾರಣ. ಈ ಆರೇಳು ದಶಕಗಳ ವಿದ್ಯಮಾನವನ್ನು ಗಮನಿಸಿದರೆ ಜಾತಿ ನಮ್ಮ ದೇಶದ ರಾಜಕಾರಣದ ಅತ್ಯಂತ ಪ್ರಮುಖ ದಾಳ. ಆಡಳಿತ(ರಾಜಕಾರಣ)ಕ್ಕೂ ಜಾತ್ಯತೀತತೆ(ಸೆಕ್ಯುಲರ್)ಗೂ ಇರುವ ವಿಸ್ತೃತ ಸೂಕ್ಷ್ಮ ಸಂಬಂಧವನ್ನು ಸಂವಿಧಾನದ ತಿದ್ದುಪಡಿ ಜಾಣಕುರುಡಿನಿಂದ ವ್ಯಾಖ್ಯಾನಿಸದೆ ಹೋಯಿತೆ? ಅಥವಾ ಬೇಕೆಂತಲೇ ಬಾಯಿಮುಚ್ಚಿಕೊಂಡಿತೆ? ಗೊತ್ತಿಲ್ಲ. ಅಂತೂ ರಾಜಕಾರಣಿಗಳಿಗೆ ಮಂತ್ರಸದೃಶವಾದ ಪದ ವರವಾಗಿ ದಕ್ಕಿಬಿಟ್ಟಿತು.

ಸೆಕ್ಯುಲರ್ ಪದ ಕಂಠೋಕ್ತವಾಗಿ ಸಂವಿಧಾನದಲ್ಲಿ ಕಾಣಿಸಿಕೊಳ್ಳುವುದಕ್ಕೆ ಮೊದಲೂ ನಮ್ಮ ಸಂವಿಧಾನವು ಜಾತ್ಯತೀತ ಮತ್ತು ಮತಾತೀತ ಆದರ್ಶದ ಕಣಸನ್ನು ತನ್ನ ಕಣ-ಕಣದಲ್ಲೂ ತುಂಬಿಕೊಂಡಿತ್ತು; ಹೊರಹೊಮ್ಮಿಸಿತ್ತು. ಅದು ಎಲ್ಲ ಓರೆ ಕೋರೆಗಳನ್ನು ಕಳೆದು ಸರ್ವಸಮಭಾವವನ್ನು ಸಾಧಿಸುವ ಪರಿಯಾಗಿತ್ತು. ಜಾತಿಮತಗಳ ಅನಿಷ್ಟದಿಂದ ಅತೀತವಾಗುವಲ್ಲಿ ಸರ್ವಸಮಭಾವವು ಮೊದಲ ಮೆಟ್ಟಿಲು ಎನ್ನುವ ಅರಿವು ಸಂವಿಧಾನ ನಿರ್ಮಾಣದ ಹಿಂದೆ ಸಮಗ್ರವಾಗಿ ಇತ್ತು. ಸರ್ವಸಮತೆಯ ಸಾಧನೆಗೆ ಸಾಮಾಜಿಕ ನ್ಯಾಯವನ್ನು ಮೀಸಲಾತಿಯ ರೂಪದಲ್ಲಿ ಸಂವಿಧಾನತಜ್ಞರು ರೂಪಿಸಿದ್ದರು. ಅದು ನಿರ್ದಿಷ್ಟ ಅವಧಿಯಲ್ಲಿ ಸಾಧಿತವಾಗಬೇಕೆಂದು ತಾಕೀತು ಮಾಡಿದ್ದರು. ಆದರೆ ಅದು ಸಾಧ್ಯವಾಗಲೇ ಇಲ್ಲ. ಇದಕ್ಕೆಲ್ಲ ಕಾರಣ ಮತ್ತದೇ ರಾಜ-ಕಾರಣ. ಮೀಸಲಾತಿಯ ಮರೆಯಲ್ಲಿ ಚುನಾವಣೆಯ ಮತ ಖಜಾನೆಯನ್ನು ರಾಜಕಾರಣಿಗಳು ಹೂಡಿಕೊಂಡರು. ಅದರಿಂದ ಅವರ ಮತ್ತು ಅವರ ಬಳಗದವರ ಖಜಾನೆಯೂ ತುಂಬಿತು. ಜಾತಿ ಮತ್ತು ಅಲ್ಪಸಂಖ್ಯಾತ ಮೀಸಲಾತಿಯ ಅನಿರ್ದಿಷ್ಟ ಮುಂದುವರಿಕೆಯಿಂದ ಜಾತ್ಯತೀತತೆ

ಮತ್ತು ಸರ್ವಧರ್ಮ ಸಮಭಾವದ ಸಮಾಧಿ ಕಟ್ಟುತ್ತಿರುವ ಶ್ರೇಯಸ್ಸು ರಾಜಕಾರಣಕ್ಕೆ ಮಾತ್ರವೇ ನಿರ್ವಿವಾದವಾಗಿ ಸಲ್ಲುತ್ತದೆ. ಇದು ಈಗ ನಿಧಾನವಾಗಿ ಜನರಿಗೆ ಅರ್ಥವಾಗತೊಡಗಿದೆ. ನಿಂತಿದ್ದಕ್ಕೆ ಕುಂತಿದ್ದಕ್ಕೆಲ್ಲ ಶ್ವೇತಪತ್ರ ತನ್ನಿ ಎಂದು ನಾಟಕವಾಡುವ ಮಂದಿ ಕೆಳಸ್ತರದವರ, ಹಿಂದುಳಿದವರ, ಬಡವರ ಕಲ್ಯಾಣಕ್ಕಾಗಿ ರೂಪಿಸಿದ ಯೋಜನೆಗಳ ಮತ್ತು ಅದಕ್ಕಾಗಿ ಖರ್ಚುಮಾಡಿದ ಮೊತ್ತದ ಬಗ್ಗೆ ರಾಜ್ಯಮಟ್ಟದಲ್ಲೂ ರಾಷ್ಟ್ರಮಟ್ಟದಲ್ಲೂ ಶ್ವೇತಪತ್ರ ತರಲಿ. ಸಾಮಾಜಿಕ ನ್ಯಾಯವನ್ನು ಹಳ್ಳ ಹತ್ತಿಸಿದವರು ಯಾರೆಂದು ತಿಳಿಯುತ್ತದೆ. ಅಲ್ಪಸಂಖ್ಯಾತತೆಯ ಅಮಲು ಹತ್ತಿಸಿ ಧಾರ್ಮಿಕತೆಯ ದುರುಪಯೋಗ ಮಾಡಿಕೊಂಡಿದ್ದೂ ಬಯಲಾಗುತ್ತದೆ. ಮೀಸಲಾತಿಯ ಲಾಭ ಪಡೆದು ಸಮಾಜದ ಮಧ್ಯಮ ಮತ್ತು ಉನ್ನತ ಮಟ್ಟವನ್ನು ಏರಿದವರು ತಮ್ಮ ಸಂತತಿಗೂ ನಿರಂತರವಾಗಿ ಮೀಸಲಾತಿ ಮುಂದುವರಿಯಬೇಕೆಂದು ಆಗ್ರಹಿಸುತ್ತಲೇ ಹೋದರೆ, ಅದು ಸರ್ವಸಮಭಾವ ಮತ್ತು ಜಾತ್ಯತೀತತೆಗೆ ಒಡ್ಡಿದ ಸವಾಲೇ ಅಲ್ಲವೆ. ಇಂಥವರು ತಮ್ಮ ಕೆಳಗಿನವರನ್ನು ನೋಡಬೇಕು. ತೀರ ಕೆಳಸ್ತರದ ಜನ ಮತ್ತು ಜನಸಾಮಾನ್ಯರು ಇವೆಲ್ಲ ಅರ್ಥವಾಗದವರಂತೆ ಇದ್ದಾರೆ. ಅವರು ಇವಕ್ಕೆಲ್ಲ ತಲೆಕೆಡಿಸಿಕೊಳ್ಳದೆ ತಮ್ಮ ಸುತ್ತಮುತ್ತಲಿನವರೊಡನೆ ಹೊಂದಿಕೊಂಡು ಹೇಗೋ ಬದುಕು ಸಾಗಿಸುತ್ತಿದ್ದಾರೆ. ಅವರಿಗೆ ಮೀಸಲಾತಿಯ ಲಾಭ ದೊರಕುತ್ತಿಲ್ಲ. ಅವರ ಮಕ್ಕಳಿಗೆ ಸರಿಯಾದ ಶಿಕ್ಷಣ ದೊರಕುತ್ತಿಲ್ಲ. ಅವರಿಗೆ ಧರ್ಮದ ಅನ್ನ ಬೇಕಿಲ್ಲ. ಅವರ ದುಡಿಯುವ ಕೈಗಳಿಗೆ ಕೆಲಸ ಬೇಕು. ಕೆಲಸಕ್ಕೆ ತಕ್ಕ ಪ್ರತಿಫಲ ಸಿಗಬೇಕು. ಅವರ ಮಕ್ಕಳಿಗೆ ಸರಿಯಾದ ಶಿಕ್ಷಣಕ್ಕೆ ವ್ಯವಸ್ಥೆ ಆಗಬೇಕು. ಒಂದುಕಡೆ ರಾಜಕಾರಣಿಗಳು ಮತ್ತು ಅವರ ಕೃಪಾಪೋಷಿತರು ಶಿಕ್ಷಣವನ್ನು ಖಾಸಗೀಕರಣಗೊಳಿಸಿ ದುಡ್ಡು ದೋಚುತ್ತಿದ್ದಾರೆ. ಸರ್ಕಾರಿ ಶಾಲೆಗಳು ವರ್ಷವೆಲ್ಲ ಒಂದಿಲ್ಲೊಂದು ಲೆಕ್ಕ ಬರೆಯುತ್ತ ಸರಕಾರದ ಸೇವೆಯಲ್ಲಿ ತೊಡಗಿರಬೇಕಾಗಿದೆ. ಸರ್ವಶಿಕ್ಷಣ ಅಭಿಯಾನದ ಕರ್ಮಕಾಂಡ ಇದು. ದೊಡ್ಡವರ ಕೈಗೆ ಕೆಲಸ; ಬಡ ಮಕ್ಕಳಿಗೆ ಸರಿಯಾದ ಶಿಕ್ಷಣ ಎನ್ನುವುದೆ ಸರಕಾರದ ನೀತಿಯಾದರೆ ಸಾಕು. ಹತ್ತೆ ವರ್ಷಗಳಲ್ಲಿ ನಿರೀಕ್ಷಿತ ಸಮಾಜ ನಿರ್ಮಾಣ ಸಾಧ್ಯವಾದೀತು.

ಜನಸಾಮಾನ್ಯರು ಜಾತಿ ಧರ್ಮಗಳ ಗೊಡವೆ ಇಲ್ಲದೆ ಪರಸ್ಪರ ಪ್ರೀತಿ ವಿಶ್ವಾಸಗಳಿಂದ ಬದುಕುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಜಾತಿ ಧರ್ಮಗಳ ಆಚರಣೆ ಅಗತ್ಯದ ಮಟ್ಟಿಗೆ ಮನೆಯೊಳಗೆ ಇರುತ್ತದೆ. ಸಾಮಾಜಿಕವಾಗಿ ಜಾತಿ ಮತಗಳ ಭೇದ ಇಲ್ಲದೆ ಗೌರವ ಪ್ರೀತಿ ವಿಶ್ವಾಸ ತೋರುತ್ತ ಬದುಕುವ ಸುಸಂಸ್ಕೃತ ನಡೆವಳಿಕೆ ನಮ್ಮ ಜನಸಾಮಾನ್ಯರ ಸಮಾಜದಲ್ಲಿ ಇಂದಿಗೂ ಇದೆ. ರಾಜಕಾರಣಿಗಳು ಮತ್ತು ಅವರ ಪರಾಕು ಪಟಾಲಮ್ಮುಗಳು ಅಲ್ಲಿ ಕಿಚ್ಚು ಹಚ್ಚುತ್ತಿರುವುದು ದಿನದಿನಕ್ಕೂ ಹೆಚ್ಚುತ್ತಲೇ ಇದೆ. ಜಾತಿಜಾತಿಗಳನ್ನು, ಮತಮತಗಳನ್ನು ಒಡೆಯುವ, ಆರೋಪ ಪ್ರತ್ಯಾರೋಪಗಳ ಅಸಹ್ಯ ಮಾತುಗಳ ವಿಜೃಂಭಣೆಯ ರಾಜಕಾರಣ ರೇಜಿಗೆ ಹುಟ್ಟಿಸುತ್ತಿದೆ. ನಮ್ಮ ದೇಶದಲ್ಲಿ ಜಾತಿ ಭಾವನೆ ಅಷ್ಟು ಸುಲಭವಾಗಿ ನಿರ್ಮೂಲವಾಗಲಾರದು. ಅದು ಕಚ್ಚಾಟಕ್ಕೆ ಕಾರಣವಾಗದ ಹಾಗೆ ತಿಳಿವಳಿಕೆ ಮೂಡಿಸುವ ಕೆಲಸ ಮೊದಲು ಆಗಬೇಕು. ಹಿಂದೆ ಆಗಿಹೋದ ಸನ್ನಿವೇಶ, ಇತಿಹಾಸ ಏನೇ ಇರಲಿ, ಇಂದು ನಮ್ಮ ಸಂವಿಧಾನದ ಆಶಯಕ್ಕೆ ಅನುಗುಣವಾಗಿ, ನಮ್ಮ ಜಾತಿ ಮತ ಭಾವನೆಗಳನ್ನು ಮೆರೆಯದೆ ಸರ್ವಸಮಭಾವ ಸರ್ವಥಾ ರೂಪಿತವಾಗಬೇಕು. ನಮ್ಮ ಜಾತಿ ಮತಗಳನ್ನು ಚಿಂತಿಸದೆ ನಾನು ಭಾರತೀಯ ಎನ್ನುವ ಭಾವ ಬಲಗೊಳ್ಳಬೇಕು. ಅದು ಜಾತ್ಯತೀತತೆಯ ಮತ್ತು ಸರ್ವಧರ್ಮ ಸಮಭಾವದ ವೇದಿಕೆಗೆ ಏರಬಲ್ಲುದು. ಇಂಥ ಚಿಂತನೆ, ಆದರ್ಶ ಸಹಸ್ರಮಾನಗಳ ಹಿಂದೆಯೇ ನಮ್ಮ ನೆಲದಲ್ಲಿ ಇತ್ತು ಎನ್ನುವುದನ್ನು ಮೇಲ್ವರ್ಗದ ಜನರು ಮತ್ತು ರಾಜಕಾರಣಿಗಳು ಮನಗಾಣಬೇಕು. •

ಕಣ್ಣು ಕಣ್ಕಟ್ಟು

–ರಹಮತ ತರೀಕೆರೆ

ರೋಣ ತಾಲೂಕಿನ ಗಜೇಂದ್ರಗಡಕ್ಕೆ ಗೆಳೆಯರ ಭೇಟಿಗೆಂದು ಹೊರಟಿದ್ದೆ. ಹಾದಿಯಲ್ಲಿ ಯಲಬುರ್ಗಾ ತಾಲೂಕಿನ ಪುಟ್ಟಹಳ್ಳಿ ನೆಲಜೇರಿ ಎಡತಾಕಿತು. ಗೋಧಿ ಉಳ್ಳಾಗಡ್ಡೆ ಸುರೇಪಾನ ಮೆಣಸು ಮೊದಲಾಗಿ ಮಳೆಯಾಶ್ರಯದ ಪೀಕು ತೆಗೆಯುವ ಎರೆಸೀಮೆಯಿದು. ಹೆಚ್ಚಿನ ತರುಣರು ಕೊಪ್ಪಳದ ಬಗಲಲ್ಲಿ ಬೀಡುಬಿಟ್ಟಿರುವ ಉಕ್ಕಿನ ಕಾರ್ಖಾನೆಗಳಿಗೆ ದಿನಗೂಲಿಗಳಾಗಿ ಹೋಗುತ್ತಾರೆ. ನೆಲಜೇರಿ ಆರ್ಥಿಕವಾಗಿ ಬಡಕಲಾದರೂ ಸಾಂಸ್ಕೃತಿಕವಾಗಿ ಸಮೃದ್ಧ ಹಳ್ಳಿ. ಈ ವೈರುಧ್ಯ ಉತ್ತರ ಕರ್ನಾಟಕದ ಬಹಳಷ್ಟು ಹಳ್ಳಿಗಳ ಲಕ್ಷಣ.

ನೆಲಜೇರಿಯ ತಟ್ಟಿ ಹೋಟೆಲಿನಲ್ಲಿ ಚಹಾಪಾನ ಮಾಡುತ್ತ ಇಲ್ಲಿ ಯಾರಾದರೂ ಜನಪದ ಗಾಯಕರು ಇದ್ದಾರೆಯೇ ಎಂದು ಕೇಳಿದೆ. ಅಲ್ಲೊಬ್ಬ ಮೂಲೆಯಲ್ಲಿ ಟೀಯನ್ನೂ ಬೀಡಿಯನ್ನೂ ಒಟ್ಟಿಗೆ ಸವಿಯುತ್ತ ಕಾಲುಚಾಚಿ ಕುಳಿತವನು ಅವಸರವಿಲ್ಲದ ದನಿಯಲ್ಲಿ 'ಅದಾನಲ್ಲ ಅಂದಾನಪ್ಪ. ರಿವಾಯತ್ ಪದ ಜಗ್ಗಿ ಹಾಡ್ತಾನ' ಎಂದನು. ಅಂದಾನಪ್ಪನವರನ್ನು ನೋಡೋಣವೆಂದು ಮನೆಗೆ ಹೋದರೆ ಹೊಲಕ್ಕೆ ಹೋಗಿದ್ದರು. ಅವರು ಬರುವವರೆಗೆ ಜಗುಲಿಯಲ್ಲೇ ಬೀಡುಬಿಟ್ಟೆ. ಒಕ್ಕಲುತನದ ಹಳೇ ಮಾಳಿಗೆಮನೆ. ಹೊರಬಾಗಿಲ ಆಜುಬಾಜು ದೊಡ್ಡದಾದ ಎರಡು ಜಗುಲಿ. ಅವುಗಳ ಮೇಲೆ ಚೀಲಗಳಲ್ಲಿ ದವಸ. ಅವುಗಳ ಬದಿಗೆ ಕೌದಿಹಾಸಿ ದಿಂಬಿಟ್ಟು ಯಜಮಾನ ಕೂರಲು ಸಿದ್ಧಗೊಳಿಸಿದ ಆಸನ. ಗೋಡೆಯ ಮೇಲೆ ದಿವಂಗತರಾದ ಕುಟುಂಬದ ಹಿರಿಯರ ಪಟಗಳು. ಅವಕ್ಕೆ ಹುಲಿಯು ಪಂಜದಿಂದ ಗೆಬರಿದಂತೆ ಎಳೆದಿರುವ ವಿಭೂತಿ ಪಟ್ಟೆ. ಮನೆಯೊಳಗೆ ಇಣುಕಿದರೆ, ಸಿನುಗು ವಾಸನೆಯ ದನದ ಕೊಟ್ಟಿಗೆ. ತಾಯಿ ಮೇಯಲು ಹೋಗಿರುವುದರಿಂದ ಒಂಟಿಯಾಗಿದ್ದು ಅಂಬಾ ಎನ್ನುತ್ತಿರುವ ಎಳೆಗರು. ಅಟ್ಟಕ್ಕೆ ಕಟ್ಟಿರುವ ಉಳ್ಳಾಗಡ್ಡಿ ಬೆಳ್ಳುಳ್ಳಿ ಸಿವುಡು; ಒಣಗಿದ ಹೀರೇಕಾಯಿ ಗೊಂಚಲು. ಕೊಟ್ಟಿಗೆಯ ಬಳಿಕ ತುಸು ಎತ್ತರದಲ್ಲಿ ಮಬ್ಬು ಬೆಳಕಿನಲ್ಲಿ ಕಾಣುವ ಉಣ್ಣುವ ಜಗುಲಿ. ನಂತರ ಹೊಗೆಯಿಂದ ಕಪ್ಪಗಾಗಿ ಇದ್ದಬದ್ದ ಬೆಳಕನೆಲ್ಲ ಕುಡಿದು ಮತ್ತಷ್ಟು ಕತ್ತಲಾಗಿರುವ ಅಡುಗೆಕೋಣೆ.

ಹೀಗೆ ಪಂಚೇಂದ್ರಿಯಗಳಿಗೆ ಕೆಲಸ ಹಚ್ಚಿ ಆರಾಮಾಗಿ ಕೂತಿರುವಾಗ ಅಂದಾನಪ್ಪನವರ ಸವಾರಿ ಬಂತು. ಆರಡಿ ಎತ್ತರದ ೭೫ ವರ್ಷದ ಹಿರಿಯ. ದಪ್ಪನೆಯ ಬಿಳಿಪಟಗ ಎದ್ದು ಕಾಣುತ್ತಿತ್ತು. ಕೈಬೆರಳು ಕುಷ್ಠದಿಂದ ಕರಗಿಹೋಗಿದ್ದರೂ ಮೋಟು ಬೆರಳಲ್ಲಿ ಸೈಕಲ್ ಹ್ಯಾಂಡಲನ್ನು ಹಿಡಿದು, ಬೀದಿಗೆ ಬೈತಲೆ ತೆಗೆದಂತೆ ಹರಿದ ಬಚ್ಚಲು ನೀರಿನ ಅಂಕುಡೊಂಕುಗಳಲ್ಲಿ ಬೀಳದಂತೆ ಸವಾರಿಸುತ್ತ ಬಂದರು. ಅಂಗಳದಲ್ಲಿ ನಿಂತ ಕಾರು ಅವರಿಗೆ ಗಲಿಬಿಲಿ ತಂದಂತಿತ್ತು. ನಮಸ್ಕಾರ ಮಾಡಿ ಭೇಟಿಯ ಉದ್ದೇಶ ತಿಳಿಸಿದೆ.

ತನ್ನ ಹಾಡುಪ್ರತಿಭೆಗೆ ಪರಸ್ಥಳದ ಜನ ಬಂದಿರುವುದು ಅರಿತು ಮುಖದಲ್ಲಿ ಅಭಿಮಾನ ಮೂಡಿದಂತೆ ತೋರಿತು. ಲಗುಬಗೆಯಿಂದ ಅಡುಗೆ ಮನೆಯೊಳಗೆ ನುಗ್ಗಿ ಬಿಸಿರೊಟ್ಟಿ ಮಾಡಲು ಹೇಳಿದರು. ದೊಡ್ಡ ಚರಿಗೆಯಲ್ಲಿ ಮುಂಜಾನೆಯಷ್ಟೆ ಕಡೆದ ಮಜ್ಜಿಗೆ ತಂದುಕೊಟ್ಟರು. ಹಳತಾದ ನೋಟುಬುಕ್ಕನ್ನು ನಾಗಂದಿಯ ಮೇಲಿಂದ ತೆಗೆದು, ಧೂಳು ಝಾಡಿಸಿ, ಅದರಲ್ಲಿದ್ದ ರಿವಾಯತ್ ಪದವನ್ನು ಹಾಡಲು ಶುರುಮಾಡಿದರು. ಅವರ ಭಾರಿಕಾಯದೊಳಗೆ ಈ ಹೆಣ್ದನಿ ಹೇಗಾದರೂ ಅಡಗಿಕೊಂಡಿದೆಯೊ ಎಂದು ಅಚ್ಚರಿಸುತ್ತಿದ್ದ ನನಗೆ ಪೈಲವಾನರಂತಿರುವ ಬಡೇಗುಲಾಮಲಿ ಖಾನರು ಜೇನಲ್ಲಿ ಅದ್ದಿತೆಗೆದಂತೆ ಹಾಡಿದ 'ಕ್ಯಾಕರ್ರೂ ಸಜನೀ ಸಾಜನ್ ನ ಆವೆ' ಠುಮ್ರಿಯ ನೆನಪಾಯಿತು. ರಿವಾಯತ್ ಹಾಡಿಕೆಯಲ್ಲಿ ಹಿಮ್ಮೇಳವಿದ್ದರೇ ಚಂದ. ಒಂಟಿದನಿ ಬೇಗ ದಣಿಯುತ್ತದೆ. ಅಂದಾನಪ್ಪ ಎರಡು ಹಾಡಿಗೆ ನಿಲ್ಲಿಸಿದರು. ಕೆಲವೇ ತಿಂಗಳುಗಳಲ್ಲಿ ತಮ್ಮೂರಿನಲ್ಲಿ ರಾಜಪ್ಪಸ್ವಾಮಿಯ ಉರುಸು ನಡೆಯಲಿದೆಯೆಂದೂ, ಅಲ್ಲಿ ಕೊಪ್ಪಳ ಸೀಮೆಯ ಬಹುತೇಕ ಗಾಯಕರು ಸೇರುವರೆಂದೂ ಆಗ ಖಂಡಿತ ಬರಬೇಕೆಂದೂ ತಿಳಿಸಿದರು.

ಇದಾದ ಐದಾರು ತಿಂಗಳಿಗೆ ಅಂದಾನಪ್ಪನವರ ಫೋನು ಬಂತು. ಉರುಸು ಫಲಾನೆ ದಿನವಿದೆಯೆಂದೂ ತಪ್ಪದೇ ಬರಬೇಕೆಂದೂ ಊಟ ವಸತಿಗೆ ಚಿಂತೆ ಮಾಡಬಾರದೆಂದೂ ತಿಳಿಸಿದರು. ಸ್ಕೂಟರಿನಲ್ಲಿ ಹೋದೆ. ಸಂಜೆಯಾಗಿತ್ತು. ಸುತ್ತಮುತ್ತಲ ಗ್ರಾಮದವರು ಓದಿಕೆ ಮಾಡಿಸಿಕೊಂಡು ಕೈಯಲ್ಲಿ ವಸ್ತ್ರಹೊದಿಸಿದ ಪ್ರಸಾದದ ತಟ್ಟೆ ಹಿಡಿದು ಗುಂಪಾಗಿ ಮನೆಗೆ ಮರಳುತ್ತಿದ್ದರು. ಅಂದಾನಪ್ಪ, ಹೆಸರಿಗೆ ತಕ್ಕಂತೆ ಅನ್ನದಾನಿ. ಶಿಷ್ಯನ ಮನೆಯಲ್ಲಿ ಬಿಸಿರೊಟ್ಟಿ ಮೊಸರು ಬದನೆಪಲ್ಯ ಮಾಲ್ದಿಯಿರುವ ಊಟ ಹಾಕಿಸಿದರು.

ರಾತ್ರಿ ಹತ್ತಕ್ಕೆ ಮೆರವಣಿಗೆ ಕುರುಬರ ಮನೆಯಿಂದ ರಾಜಪ್ಪನ ದರ್ಗಾಕ್ಕೆ ಹೊರಟಿತು. ಅದರ ಮುಂದೆ ಮನೆಯ ಹಿರೀಕರೊಬ್ಬರು ಮೈದುಂಬಿದ್ದರು. ಅವರ ಜತೆ ಬೇಡ ಸಮುದಾಯಕ್ಕೆ ಸೇರಿದ ಹನುಮಂತದೇವರ ಗುಡಿಯ ಪೂಜಾರಿ ಜತೆಗೂಡಿದನು. ಮೆರವಣಿಗೆಯಲ್ಲಿ ಮುಸ್ಲಿಮರನ್ನೂ ಒಳಗೊಂಡಂತೆ ಊರಿನ ಎಲ್ಲ ಜಾತಿ ಸಮುದಾಯಗಳಿಗೆ ಸೇರಿದ್ದರು. ಅಂದಾನಪ್ಪನವರು ದೊಡ್ಡದೊಂದು ಕೋಲಿನ ತುದಿಗೆ ಹಾಡುಗಾರರಿಗೆ ಕೊಡುವ ಬಹುಮಾನದ ಬೆಳ್ಳಿಬಳೆಗಳನ್ನು ಸಿಕ್ಕಿಸಿಕೊಂಡು ಮುಂಚೂಣಿಯಲ್ಲಿದ್ದರು. ಮೆರವಣಿಗೆ ಹಿಂಭಾಗದಲ್ಲಿ 'ಕಂದೂರಿ'ಗೆ ಬಲಿಯಾಗಲಿರುವ ಕುರಿಗಳನ್ನು ಹಿಡಿದುಕೊಂಡು ಬರುತ್ತಿದ್ದ ಭಕ್ತರ ಸೈನ್ಯವೇ ಇತ್ತು.

ಊರಹೊರಗೆ ದೊಡ್ಡ ಬಯಲಿನಲ್ಲಿ ಮರಗಳ ಗುಂಪಿನ ನಡುವೆ ರಾಜಪ್ಪಜ್ಜನ ಸಮಾಧಿಯಿದೆ. ಅದು ಸೂಫೀ ಗೋರಿಯಂತೆ ಉತ್ತರ ದಕ್ಷಿಣಮುಖಿಯಾಗಿದೆ. ಒಬ್ಬ ಮುಜಾವರ್ ಅಲ್ಲಿ ಫಾತೆಹಾ ನೆರವೇರಿಸುತ್ತಿದ್ದನು. ರಾಜಪ್ಪಜ್ಜನ ಪುಣ್ಯತಿಥಿಗೆ 'ಉರುಸು' ಎಂದು ಕರೆಯುವುದರಿಂದ, ಇದು ಸೂಫಿಸಂತನಿಗೆ ಸಂಬಂಧಪಟ್ಟಿದ್ದು ಎಂದು ನನ್ನ ಊಹೆಯಾಗಿತ್ತು. ಆದರೆ ರಾಜಪ್ಪಜ್ಜ ಎಂಬತ್ತು ವರ್ಷಗಳ ಹಿಂದೆ ಬದುಕಿದ್ದ ಆರೂಢನಾಗಿದ್ದರು. ಹಿಂದುಳಿದ ಜಾತಿಗೆ ಸೇರಿದ್ದ ಆತನ ಶಿಷ್ಯರಲ್ಲಿ ಹೆಚ್ಚಿನವರು ದಲಿತರಾಗಿದ್ದು, ಅವರ ಸಮಾಧಿಗಳು ಆಸುಪಾಸಿನಲ್ಲಿದ್ದವು.

ರಾಜಪ್ಪಜ್ಜನ ಸಮಾಧಿ ಪೌಳಿದ್ವಾರದಲ್ಲಿ ಮೊಹರಂ ಚಿಹ್ನೆಗಳಾದ ಹುಲಿ ಹಾಗೂ ಹಸ್ತದ ಚಿತ್ರಗಳೂ ಇವುಗಳ ಜತೆ ಗಣಪತಿ ಹಾಗೂ ಹನುಮಂತನ ಚಿತ್ರಗಳೂ ಬರೆಯಲ್ಪಟ್ಟಿದ್ದವು. ಅಂದು ನಡೆಯಲಿದ್ದ ರಿವಾಯತ್ ಪದಗಳ ಹಾಡಿಕೆ ಸಹ ಮೊಹರಂ ಸಂಪ್ರದಾಯಕ್ಕೆ ಸೇರಿತ್ತು. ರಾತ್ರಿ ಹತ್ತರ

ಸುಮಾರಿಗೆ ಗಾಯಕರು ಕಲೆತರು. ಕಂಬಕ್ಕೆ ಕಟ್ಟಿದ ಮೈಕಿನ ಸುತ್ತ ಗಾಯಕರು ತಮ್ಮ ಮೇಳದ ಜತೆ ಪ್ರದಕ್ಷಿಣೆ ಹಾಕುತ್ತ ಹಾಡಿದರು. ಹಾಡಿಕೆ ಬೆಳಗಿನ ಜಾವಕ್ಕೆ ಮುಗಿಯಿತು. ಚೀಲ ಚಾಪೆ ಹಾಸಿಕೊಂಡು ಕೌದಿ ಹೊದ್ದು ಕುಳಿತ ಜನ ಕೇಳಿತು. ಗಾಯಕರನ್ನು ಹಾಡಲು ಕರೆಯುವುದು, ಚೆನ್ನಾಗಿ ಹಾಡಿದಾಗ ಉತ್ತೇಜಿಸುವುದು, ಗೆದ್ದವರಿಗೆ ಬೆಳ್ಳಿಯ ಬಳೆ ಬಹುಮಾನವಾಗಿ ಕೊಡುವುದು ಮುಂತಾದ ಕಾರ್ಯಗಳನ್ನು ಅಂದಾನಪ್ಪ ಹರೆಯದವರಂತೆ ಓಡಾಡುತ್ತ ಮಾಡಿದರು.

ಉರುಸಿನ ವಿಶೇಷ 'ಕಂದೂರಿ' ಎನ್ನಲಾಗುವ ಮಾಂಸದೂಟ. ರಾತ್ರಿ ಹತ್ತರ ಸುಮಾ–ರಿಗೆ ಮೆರವಣಿಗೆಯಲ್ಲಿ ಆಗಮಿಸಿದ್ದ ಕುರಿಗಳನ್ನು ಮುಲ್ಲಾ ಹಲಾಲ್ ಮಾಡಿದನು. ಅವನ್ನು ಜನ ಬೀಡುಬಿಟ್ಟಲ್ಲೆ ದೊಂದಿಯ ಗ್ಯಾಸ್‌ಲೈಟಿನ ಬೆಳಕಲ್ಲಿ ಹಸಿಗೆ ಮಾಡಿದರು. ನಡುರಾತ್ರಿಯ ಹೊತ್ತಿಗೆ ಅಡುಗೆ ಶುರುವಾಯಿತು. ಇಡೀ ಬಯಲು ಒಲೆಗಳ ಬೆಂಕಿಯಿಂದ ಬೀಡುಬಿಟ್ಟ ಸೈನಿಕ ಶಿಬಿರವಾಯಿತು. ಬೆಳಗಿನ ಜಾವ ಪೂಜಾರಿ ಮೈದುಂಬಿ ವರ್ಷದ ಮಳೆಬೆಳೆಯ ಕಾರ್ಣಿಕ ಹೇಳಿದನು. ಇದಾದ ಬಳಿಕ ಊಟ ಶುರು. ಜಾತ್ರೆಗೆ ಬಂದವರನ್ನು ಎಲ್ಲರೂ ಕರೆದು ಉಣ್ಣಿಸುವವರೇ. ಮಾಡಿದ ಅಡುಗೆ ಬೆಳಕು ಕಣ್ಬಿಡುವ ಮೊದಲು ಖಾಲಿಯಾಗಬೇಕು. ಮನೆಗೆ ಒಯ್ಯುವಂತಿಲ್ಲ. ಊಟದ ಜತೆ ಉರುಸು ಮುಕ್ತಾಯ ಕಂಡಿತು. ಜನ ಟಂಟಂ, ಬಂಡಿಗಳಲ್ಲಿ ಊರುಗಳಿಗೆ ತೆರಳಿದರು. ಬಿಸಿಲೇರುವ ಹೊತ್ತಿಗೆ ದರ್ಗಾ ನಿರ್ಜನವಾಯಿತು.

ನೇಲಜೇರಿಯಲ್ಲಿ ಉರಿಸಿದೆ, ಸೂಫಿ ಪರಂಪರೆಯಿಲ್ಲ; ರಿವಾಯತ್ ಹಾಡಿನ ಪರಂಪರೆಯಿದೆ, ಮೊಹರಂ ಅಲ್ಲ; ಮುಸ್ಲಿಮರ ಭಾಗವಹಿಸುವಿಕೆಯಿದೆ, ಸಾಂಪ್ರದಾಯಿಕ ಇಸ್ಲಾಮಲ್ಲ; ಹತ್ತಕ್ಕೆ ಒಂಬತ್ತರಷ್ಟು ಹಿಂದುಗಳ ಭಾಗವಹಿಸುವಿಕೆಯಿದೆ, ಜಾತ್ರೆಯಲ್ಲ; ಅವಧೂತ ಪರಂಪರೆಯ ಲಕ್ಷಣಗಳಿವೆ, ಗುರುದೀಕ್ಷೆ ಕೊಡುವ ಪದ್ಧತಿಯಿಲ್ಲ; ಹಾಗಾದರೆ ಇದನ್ನು ಯಾವ ಧರ್ಮ ಅಥವಾ ಪಂಥದ ಚೌಕಟ್ಟಿನಲ್ಲಿಟ್ಟು ನೋಡುವುದು? ನಿರ್ದಿಷ್ಟ ಚೌಕಟ್ಟಿನಲ್ಲಿಟ್ಟು ನೋಡುವ ಅಥವಾ ಅದಕ್ಕೆ ಹೆಸರು ಕೊಡುವ ತುರ್ತು ಉರುಸಿನಲ್ಲಿ ಭಾಗವಹಿಸಿದ ಯಾರಲ್ಲೂ ಇರಲಿಲ್ಲ. ಅವರಿಗೆ ತಾವು ಮಾಡುವ ಉರುಸು, ಹಾಡುವ ಹಾಡು, ಉಣ್ಣುವ ಊಟ ಯಾವ ಧರ್ಮಕ್ಕೆ ಸಂಬಂಧಿಸಿದವು ಎಂಬುದು ಪ್ರಶ್ನೆಯಾಗಿ ಕಾಡದಿರುವಾಗ, ನನಗೇಕೆ ಚೌಕಟ್ಟಿನ ಪ್ರಶ್ನೆ ಕಾಡುತ್ತಿದೆ? ಯಾವುದೇ ಧಾರ್ಮಿಕ ಆಚರಣೆಯನ್ನು ಈಗಾಗಲೇ ನಿರ್ವಚನಗೊಂಡಿರುವ ಜಾತಿ ಧರ್ಮ ಇಲ್ಲವೇ ಪಂಥದ ಚೌಕಟ್ಟಿನಲ್ಲಿ ಇಟ್ಟುನೋಡಬೇಕು ಎಂಬುದು ನನ್ನ ಬೌದ್ಧಿಕ ತುರ್ತೇ? ನೆಲಜೇರಿಯ ಉರುಸು ತನಗೆ ತಾನೇ ಸ್ಥಳೀಯವಾಗಿ ರೂಪುಗೊಂಡಿರುವ ಜನತೆಯ ಧರ್ಮ. ಇದರಲ್ಲಿ ಸೂಫಿಗಳ ಅವಧೂತರ ಮೊಹರಮ್ಮಿನ ಇಸ್ಲಾಮಿನ ಚಹರೆಗಳೆಲ್ಲ ಸಹಜವಾಗಿ ಒಗ್ಗೂಡಿವೆ. ಇಂತಹ ಅನೇಕ ತಾಣ ಮತ್ತು ಸಮುದಾಯಗಳು ನಾಡಲ್ಲಿವೆ. ಈ ಲೋಕಗಳನ್ನು ಅರಿಯಲು ಸದ್ಯ ಚಾಲ್ತಿಯಲ್ಲಿರುವ ಚೌಕಟ್ಟು ಸಾಲುವುದಿಲ್ಲ. ರಾಜಕೀಯವಾಗಿ ಧರ್ಮವನ್ನು ನೋಡಲು ರೂಪುಗೊಂಡಿರುವ ಕಣ್ಕಟ್ಟುಗಳಂತೂ ಯಾತಕ್ಕೂ ಬಾರವು. ಈ ಲೋಕಗಳನ್ನು ನೋಡಲು ತೆರೆದಮನಸ್ಸಿನ ಕಣ್ಣನ್ನು ಪಡೆದುಕೊಳ್ಳುವ ಅಗತ್ಯವಿದೆ. ಹಿಂದೆ ಕಲಿತಿದ್ದನ್ನು ಮಾತ್ರ ನೋಡುವ ಕಣ್ಕಟ್ಟುಗಳನ್ನಲ್ಲ.

ಹಂಪಿಗೆ ತೆರಳುವ ಮುನ್ನ ಅಂದಾನಪ್ಪನವರಿಗೆ ವಿದಾಯ ಹೇಳಲೆಂದು ಹುಡುಕಿದೆ. ಜಂಗುಳಿಯಲ್ಲಿ ಸಿಗಲಿಲ್ಲ. ಅವರ ಮನೆಗೆ ಬಂದು ಕೇಳಿದೆ. ಅಷ್ಟುಹೊತ್ತಿಗೆ ಅವರು ಸೈಕಲ್ ಹತ್ತಿ ಹೊಲಕ್ಕೆ ಹೋಗಿಬಿಟ್ಟಿದ್ದರು. ●

ನಿಮ್ಮ ಜಾತಿ ಯಾವುದು?

– ಸುಧಾಕರ ಶರ್ಮ

ನಮ್ಮದು ಬ್ರಾಹ್ಮಣ ಜಾತಿ, ನಾವು ಕುರುಬರು, ನಮ್ಮದು ಪರಿಶಿಷ್ಟ, ನಾವು ಲಿಂಗಾಯಿತರು, ನಾವು ಅಯ್ಯಂಗಾರ್, ನಾವು ಗೌಡರು, ನಾವು ಒಕ್ಕಲಿಗರು ..... ಇತ್ಯಾದಿ. ಇವರೆಲ್ಲರೂ ಸುಳ್ಳು ಹೇಳುತ್ತಿದ್ದಾರೆ! ಸಾಮಾಜಿಕ ಪ್ರತಿಷ್ಠೆಗಾಗಿ, ಸರ್ಕಾರಿ ಸೌಲಭ್ಯಗಳಗಾಗಿ, ಮೀಸಲಾತಿಗಾಗಿ, ವೋಟ್‌ಬ್ಯಾಂಕ್‌ಗಾಗಿ ಇವರೆಲ್ಲರೂ ಆತ್ಮವಂಚನೆ ಮಾಡಿಕೊಳ್ಳುತ್ತಿದ್ದಾರೆ!! ಈ ಸುಳ್ಳು, ಆತ್ಮವಂಚನೆಗಳನ್ನು ಉಳಿಸಿ, ಸಲಹಿ, ಗಣತಿ ಮಾಡುವ ರಾಜಕೀಯ ಅವ್ಯವಸ್ಥೆ ಭ್ರಷ್ಟ!!! ಜಾತಿ ಎನ್ನುವ ಪದಕ್ಕೆ ಸಮಾನಾರ್ಥಕ ಪದ ನಾವು ಇಂದು ತಿಳಿದಿರುವಂತೆ Caste ಊ ಅಲ್ಲ Religion ಕೂಡ ಅಲ್ಲ! ಇವು ಅಸ್ವಾಭಾವಿಕ, ಕೃತಕ, ದುರುದ್ದೇಶಪೂರಿತ, ಸಮಾಜಘಾತುಕ. ಆದರೂ, ಇವುಗಳ ಹೆಸರಿನಲ್ಲಿ ಶತಕಗಳ ಕಾಲ ದೌರ್ಜನ್ಯ, ಶೋಷಣೆ, ಅತ್ಯಾಚಾರ, ಸ್ಪೃಶ್ಯಾಸ್ಪೃಶ್ಯ, ಮೇಲು–ಕೀಳುಗಳು ಮುಂತಾದವು ನಡೆದಿದ್ದು, ಇಂದಿಗೂ ನಡೆಯುತ್ತಿರುವುದು ಹೃದಯವುಳ್ಳವರೆಲ್ಲರೂ, ಚಿಂತನೆ ಮಾಡಬಲ್ಲವರೆಲ್ಲರೂ ತಲೆತಗ್ಗಿಸಬೇಕಾದ ಸಂಗತಿ, ತಡವಾಗಿದ್ದರೂ ಗಂಭೀರವಾಗಿ ಪುನರ್ವಿಮರ್ಶೆ ಮಾಡಿಕೊಳ್ಳಬೇಕಾದ ಸಮಯ.

'ಜಾತಿ' ಪದದ ಮೂಲ ಅರ್ಥ 'ಹುಟ್ಟಿನೊಂದಿಗೆ ಬರುವುದು'.

ಇಂದು ರೂಢಿಯಲ್ಲಿರುವ ಜಾತಿಗಳು ಯಾವುವೂ ಹುಟ್ಟಿನಿಂದ ಬಂದವಲ್ಲ. ನಾವು ಬೆಳೆಯುವ ಪರಿಸರದಲ್ಲಿ ಮುಖ–ಮೂತಿಗಳಿಗೆ ಬಳಿದುಕೊಂಡ ಕಸ! ಮಗುವೊಂದು ಎಲ್ಲೇ ಹುಟ್ಟಿರಲಿ, ಗೌಡರ ಹಟ್ಟಿಯಲ್ಲಿ ಬೆಳೆದರೆ ತನ್ನನ್ನು ತಾನು ಗೌಡನೆಂದು ತಿಳಿಯುತ್ತದೆ. ಅದೇ ಮಗು ಅಯ್ಯಂಗಾರಿಗಳ ಮನೆಯಲ್ಲಿ ಬೆಳೆದರೆ ಅದು ತನ್ನನ್ನು ಅಯ್ಯಂಗಾರಿಯೆಂದು ತಿಳಿಯುತ್ತದೆ. ಇಂದಿನ ಜಾತಿಗಳಿಗೆ ಹುಟ್ಟಿನಿಂದ ಯಾವ ಲೇಪವೂ ಇಲ್ಲ. ಹುಟ್ಟಿನಿಂದಲೇ ಇಂದಿನ ಜಾತಿಗಳು ಉಂಟಾಗುತ್ತವೆ ಎಂದು ಇನ್ನೂ ಯಾರಾದರೂ ವಾದ ಮಾಡುವುದಾದರೆ, ಹುಟ್ಟಿದ ಮಗುವನ್ನು ನೋಡಿ ಅದರ ಜಾತಿಯನ್ನು ಹೇಳಬೇಕು!! ಈ ಸವಾಲಿನಲ್ಲಿ ಯಾರೂ ಗೆಲ್ಲುವುದಿಲ್ಲ. ಹುಟ್ಟುವ ಯಾವ ಮಗುವೂ ಇಂದಿನ ಜಾತಿಗಳ ಚಿಹ್ನೆಗಳಾದ ವಿಭೂತಿ, ಗಂಧ, ನಾಮ ಇತ್ಯಾದಿಗಳನ್ನು ಧರಿಸಿ ಹುಟ್ಟುವುದಿಲ್ಲ!

ಹುಟ್ಟಿನೊಂದಿಗೆ ಬರುವುದರಿಂದ ನೋಡಿದ ತಕ್ಷಣ ಜಾತಿ ಯಾವುದೆಂದು ಗೊತ್ತಾಗಿಬಿಡಬೇಕು. ಇಂದಿನ ಜಾತಿಗಳಲ್ಲಿ ಇದು ಖಂಡಿತಾ ಸಾಧ್ಯವಿಲ್ಲ. ನಿಮ್ಮ ಜಾತಿ ಯಾವುದೆಂದು ಕೇಳಿಯೇ ತಿಳಿಯಬೇಕು. ಅವರ ಉತ್ತರ ನಿಜವೋ ಸುಳ್ಳೋ ಹೇಳಲಾಗುವುದಿಲ್ಲ. ಜಾತಿ ದೃಢೀಕರಣ ಪತ್ರ ಕೇಳಿ ಪಡೆಯಬೇಕು. ಅದನ್ನೂ ಸುಳ್ಳಾಗಿ ಸೃಷ್ಟಿಸಿ ವಂಚಿಸಿದರೆ ಏನೂ ಮಾಡುವುದಕ್ಕಾಗುವುದಿಲ್ಲ.

ನಿಜವಾದ ಜಾತಿಯು ಹುಟ್ಟಿನೊಂದಿಗೆ ಬರುವುದಾದ್ದರಿಂದ, ಅದು ಬದಲಾವಣೆಯಾಗದೆ ಸಾಯುವವರೆಗೂ ಹಾಗೆಯೇ ಇರುತ್ತದೆ. ಇಂದಿನ ಜಾತಿಗಳನ್ನು ಎಷ್ಟು ಸಲ ಬೇಕಾದರೂ ಬದಲಾಯಿಸಬಹುದು. ಒಂದು ನೋಟರಿ ಅಫಿಡವಿಟ್ ಮತ್ತು ದಿನಪತ್ರಿಕೆಯಲ್ಲಿ ಜಾಹಿರಾತು ಕೊಟ್ಟರೆ ಆಯಿತು! ಮದುವೆಯಾದ ಮೇಲೆ ಹೆಂಡತಿಯ ಜಾತಿ ಬದಲಾಗಿ ಗಂಡನ ಜಾತಿಯೇ ಅವಳದಾಗುತ್ತದೆ. ಕಾನೂನಿನ ದೃಷ್ಟಿಯಿಂದ ಕೆಲವೊಮ್ಮೆ ಹೀಗೆ ಆಗುವುದಿಲ್ಲ.

ಗಂಡು-ಹೆಣ್ಣು ಸೇರಿ ತಮ್ಮಂತಹುದೇ ಒಂದು ಮರಿಯನ್ನು ಪಡೆದರೆ ಅವೆರಡೂ ಒಂದೇ ಜಾತಿ. ಕತ್ತೆ, ನಾಯಿಯ ಸೇರುವಿಕೆಯಿಂದ ಸಂತಾನ ಉಂಟಾಗುವುದಿಲ್ಲ. ಆದ್ದ-ರಿಂದ ಅವೆರಡರ ಜಾತಿ ಬೇರೆ. ಒಂದು ವಿಧದ ಮಾವಿಗೆ ಮತ್ತೊಂದು ವಿಧದ ಮಾವನ್ನು ಕಸಿ ಮಾಡಬಹುದು. ಹಾಗಾಗಿ ಅವೆರಡರ ಜಾತಿಯೂ ಒಂದೇ. ಜಗತ್ತಿನ ಯಾವುದೇ ಮೂಲೆಯಲ್ಲಿರುವ ಮನುಷ್ಯನೊಬ್ಬನು ಜಗತ್ತಿನ ಯಾವುದೇ ಮೂಲೆಯಲ್ಲಿರುವ ಮನುಷ್ಯಳೊಂದಿಗೆ ಕೂಡಿದಾಗ ಸಂತಾನ ಉತ್ಪತ್ತಿಯಾಗುತ್ತದೆ. ಹಾಗಾಗಿ ಆ ಮನುಷ್ಯ-ಮನುಷ್ಯಳು ಒಂದೇ ಜಾತಿ. ಇದು ವೈಜ್ಞಾನಿಕ ವಿವರಣೆ.

ಇಂದು ಅಂತರ್ಜಾತಿ ವಿವಾಹವೆಂದರೆ ಇಂದಿನ ಯಾವುದೋ ಎರಡು ಸುಳ್ಳು ಜಾತಿಗಳ ನಡುವಣ ವಿವಾಹ. ನಿಜವಾದ ಅರ್ಥದಲ್ಲಿ ಮನುಷ್ಯನಿಗೂ, ಕತ್ತೆಗೋ, ಕುದುರೆಗೋ ವಿವಾಹವಾದರೆ ಅದು ಅಂತರ್ಜಾತೀಯ ವಿವಾಹ! ಸಂತಾನ ಉಂಟಾಯಿತೆಂದರೆ ಅದು ಸಮಜಾತೀಯ ವಿವಾಹವೇ ಹೊರತು ಅಂತರ್ಜಾತೀಯ ವಿವಾಹ ಅಲ್ಲವೇ ಅಲ್ಲ. ಈ ವೈಜ್ಞಾನಿಕ ಸತ್ಯವನ್ನು ಅರಿಯದೆ ಅಥವಾ ಕಡೆಗಣಿಸಿ ಆದ, ಆಗುತ್ತಿರುವ ಅನಾಹುತಗಳಿಗೆ ಲೆಕ್ಕವೇ ಇಲ್ಲ. ಇಂದಿಗೂ ವಿವಾಹ ಸಂಬಂಧ ನೋಡುವಾಗ ಈ ಜಾತಿಯ ಪೀಡೆಯು ಕಾಡಿಸುತ್ತಲೇ ಇದೆ. ಮತ್ತದೇ ಪ್ರಶ್ನೆ – ನಿಮ್ಮ ಜಾತಿ ಯಾವುದು? ನಮ್ಮದು ಮಾನವ ಜಾತಿ, ನಮ್ಮದು ಮನುಷ್ಯ ಜಾತಿ ಎಂದಷ್ಟೇ ಹೇಳುವವರು ಮಾತ್ರ ಸತ್ಯವನ್ನೇ ಹೇಳುತ್ತಿದ್ದಾರೆ.

ಮಾನವ ಎಂಬ ಜಾತಿ ಹುಟ್ಟಿನಿಂದ ಬಂದದ್ದು, ಸಾಯುವವರೆಗೆ ಬದಲಾಗದ್ದು. ನೋಡಿದ ತಕ್ಷಣ ತಿಳಿಯುತ್ತದೆ. ದೃಢೀಕರಣ ಪತ್ರದ ಅವಶ್ಯಕತೆಯಿಲ್ಲ. ಸುಳ್ಳು ದೃಢೀಕರಣ ಪತ್ರ ಸಾಧ್ಯವಿಲ್ಲ.

ಇಂದಿನ ಈ ದುಷ್ಟ ಜಾತಿಪದ್ಧತಿಗೆ ಮೂಲವೆಲ್ಲಿಯದು? ಧೂರ್ತರು ತಮ್ಮ ತಲೆಗಳಲ್ಲಿ ಸೃಷ್ಟಿಸಿರುವ ಸುಳ್ಳಿನ ಕಂತೆ-ಬೊಂತೆ ಇದು. ಈ ಅವ್ಯವಸ್ಥೆಯಲ್ಲಿ ಹೆಚ್ಚೆನಿಸಿಕೊಂಡವರು,

ಬಲಶಾಲಿಗಳು ಆ ಕಲ್ಪನೆಯನ್ನು ಒಪ್ಪಿ – ಅವರಿಗೆ ಅದರಲ್ಲಿ ಲಾಭವಿದೆಯಲ್ಲ – ನೀಚರೆಂದು ಅವರು ಕರೆದವರನ್ನು, ದುರ್ಬಲರನ್ನು ತುಳಿದು ಸವಾರಿ ಮಾಡಿದರು. ಅಂತಹವರೇ ತಲೆ-ತಲೆಮಾರುಗಳಿಂದ ಈ ಹೊಲಸು ಜಾತಿಪದ್ಧತಿಯನ್ನು ಉಳಿಸಿ, ಪೋಷಿಸುತ್ತಲೇ ಬಂದಿದ್ದಾರೆ. ಮೊಸರನ್ನ ತಿಂದ ಈ ಕೋತಿಗಳು ಅದನ್ನು ಮೇಕೆಯ ಮೂತಿಗೆ ಬಳಿದಿದ್ದಾರೆ.ಈ ಮೇಕೆಯೇ, ವೇದಗಳೇ ಜಾತಿಪದ್ಧತಿಯ ಮೂಲವೆಂದು ಸಾಮಾನ್ಯರು ತಿಳಿದರೆ ಪರವಾಗಿಲ್ಲ.ಆದ-ರೆ ವಿದ್ಯಾವಂತರು, ಬುದ್ಧಿಜೀವಿಗಳು, ಚಿಂತಕರು, ವಿಮರ್ಶಕರು, ವಿಜ್ಞಾನಿಗಳು, ಪ್ರಗತಿಶೀಲರು ಎಂದು ತಮ್ಮನ್ನು ತಾವು ಗುರುತಿಸಿಕೊಳ್ಳುವ ಜನರೇ ತಪ್ಪುಮಾಡಿದರೆ ಸಮಾಜಕ್ಕೆ ಸರಿಯಾದ ದಾರಿತೋರಿಸುವವರು ಯಾರು?

ವೇದಗಳಲ್ಲಿ ಖಂಡಿತವಾಗಿ ಇಂದಿನ ಜಾತಿಪದ್ಧತಿಯ ಬೇರುಗಳು ಇಲ್ಲ. ಅವುಗಳ ಪ್ರಕಾರ ಜಾತಿ ಒಂದೇ. ಮಾನವ ಜಾತಿ.ವೇದಗಳಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮೊದಲಾದ ಪದಗಳು ಇಲ್ಲವೇ? ಇವೆ. ಆದರೆ, ಅವು ಎಲ್ಲಿಯೂ, ಅಪ್ಪಿ-ತಪ್ಪಿಯೂ ಜಾತಿಸೂಚಕಗಳೆಂದು ಹೇಳಲ್ಪಟ್ಟಿಲ್ಲ. ಅವೆಲ್ಲ ವರ್ಣಗಳು. ವರ್ಣವೆಂದರೆ, ನಮ್ಮ ಗುಣ, ಕರ್ಮ, ಸ್ವಭಾವ, ಸಾಮರ್ಥ್ಯ, ವೃತ್ತಿಗಳನ್ನನುಸರಿಸಿ ಆಯ್ಕೆ ಮಾಡಿಕೊಳ್ಳಲು ಸಂಪೂರ್ಣ ಸ್ವಾತಂತ್ರ್ಯವಿರುವ ಜೀವನಕ್ರಮ. ಹುಟ್ಟಿನಿಂದ ಬರುವಂಥದ್ದು ಖಂಡಿತ ಅಲ್ಲ. ಅವರ ವರ್ಣ ಅವರನ್ನು ನೋಡಿದ ತಕ್ಷಣ ತಿಳಿಯದೇ ಅವರ ಕೌಶಲ್ಯವನ್ನು ಕಂಡು ತಿಳಿಯಬೇಕು. ಆಯ್ಕೆ ಅಕಸ್ಮಾತ್ ತಪ್ಪಾಗಿದ್ದಲ್ಲಿ ತಿದ್ದಿ ಸರಿಪಡಿಸಿಕೊಂಡು ಮರು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿದೆ. ವರ್ಣವು ಪ್ರತಿಯೊಬ್ಬ ವ್ಯಕ್ತಿಯ ಆಯ್ಕೆಯಾದ್ದರಿಂದ ಆನುವಂಶಿಕವೂ ಅಲ್ಲ, ಸಮಾನವರ್ಣದವರೇ ಹುಟ್ಟಬೇಕೆಂಬ ನಿಯಮವೂ ಇಲ್ಲ.

ಆಯ್ಕೆಗೆ ಅವಕಾಶವಿದೆಯೆಂದಾಗ ಎಲ್ಲರೂ ಬ್ರಾಹ್ಮಣರೇ ಆಗಲು ಬಯಸುತ್ತಾರೆ. ಶೂದ್ರಜೀವನವನ್ನು ಯಾರೂ ಆರಿಸಿಕೊಳ್ಳುವುದಿಲ್ಲ. ಹೀಗೆನ್ನುವವರ ತಲೆಯಲ್ಲಿ ಶ್ರೇಷ್ಠ, ನೀಚ ಎಂಬ ಭೇದವಿದೆ. ಆದರೆ ವೇದಗಳಲ್ಲಿ ಇಂತಹ ಭೇದಕ್ಕೆ ಅವಕಾಶವಿಲ್ಲ – *ಅಜ್ಯೇಷ್ಠಾಸೋ ಅಕನಿಷ್ಠಾಸಃ ಏತೇ ಸಂ ಭ್ರಾತರೋ ವಾವೃಧುಃ ಸೌಭಗಾಯ* ॥ (ಋಕ್.೫.೬೦.೫.)– 'ನಿಮ್ಮಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ. ಸಹೋದರರಂತೆ ಒಂದಾಗಿ ಉನ್ನತಿಯನ್ನು ಸಾಧಿಸಿರಿ.' ವೇದದ ಮೇಲೆ ಗೂಬೆ ಕೂಡಿಸುವವರು ಈ ಮಂತ್ರವನ್ನೊಮ್ಮೆ ಏಕೆ ನೋಡಬಾರದು? ಇವರ ಕಣ್ಣಿಗೆ ರಾಚುವುದು – *ಪದ್ಭ್ಯಾಂ ಶೂದ್ರೋ ಅಜಾಯತ* – ಎಂಬ ಮಂತ್ರಭಾಗದ ತಪ್ಪು ಭಾಷಾಂತರ. ವೇದ ಭಾಷೆಯಲ್ಲಿ ಪದ್ಭ್ಯಾಂ ಎಂಬುದಕ್ಕೆ ಕಾಲುಗಳಿಂದ ಮತ್ತು ಕಾಲುಗಳಿಗೋಸ್ಕರ ಎಂಬ ಎರಡು ಅರ್ಥಗಳೂ ಬರುತ್ತವೆ. ಸರಿಯಾದ ಅರ್ಥ ಕಾಲುಗಳಿಗೋಸ್ಕರ ಎಂಬುದೇ ಆಗಿದೆ. ಹಿಂದಿನ ಮಂತ್ರ ನೋಡಿದಾಗ ಈ ನಿರ್ಣಯ ಸರಿಯೆನಿಸುತ್ತದೆ. ಅದರಲ್ಲಿ – *ಕಿಮೂರೂ ಪಾದಾವುಚ್ಯೇತೇ* ॥ (ಯಜು.೩೧.೧೦.) –(ಸಮಾಜವನ್ನು ವ್ಯಕ್ತಿರೂಪಕ್ಕೆ ಹೋಲಿಸಿದರೆ) ಅದರ 'ತೊಡೆಯಾವುದು, ಕಾಲಿನ ಕೆಲಸ ಮಾಡುವುದು ಯಾವುದು ಎಂದು ಹೇಳಲ್ಪಡುತ್ತದೆ?' ಎಂಬ ಪ್ರಶ್ನೆ ಇದೆ. ಈ ಪ್ರಶ್ನೆಗೆ ಉತ್ತರವಾಗಿ ಕಾಲುಗಳಿಗೋಸ್ಕರ ಶೂದ್ರ ಎಂಬ ಉತ್ತರವಿದೆ. ಕಾಲುಗಳಿಂದ ಶೂದ್ರ ಬಂದ ಎಂಬ ಉತ್ತರ ಮೇಲಿನ ಪ್ರಶ್ನೆಗೆ ಹೊಂದುವುದಿಲ್ಲ! ಇಷ್ಟಕ್ಕೂ, ಪಾದಗಳು ಕೀಳೆಂದವರಾರು? ಅದಿಲ್ಲದ ವ್ಯಕ್ತಿ, ಸಮಾಜ ಹೆಳವನಿದ್ದಂತೆ. ಉನ್ನತಿ, ಪ್ರಗತಿಯ

ಕನಸನ್ನೂ ಕಾಣಲಾಗುವುದಿಲ್ಲ. ತಲೆ, ಬಾಹುಗಳು, ಮಧ್ಯಭಾಗ ಮತ್ತು ತೊಡೆ ಮತ್ತು ಕಾಲುಗಳು ಚೆನ್ನಾಗಿ ಕೆಲಸಮಾಡಿದಾಗಲೇ, ಹೊಂದಾಣಿಕೆಯಿಂದ ದುಡಿದಾಗಲೇ ವ್ಯಕ್ತಿ-ಸಮಾಜಕ್ಕೆ ಹಿತ-ಆರೋಗ್ಯ. ಪರಸ್ಪರರಲ್ಲಿ ಪ್ರೀತಿ-ಪ್ರೇಮಗಳು, ಗೌರವಾದರಗಳು ತುಂಬಿರಲಿ ಎಂಬುದೇ ವೇದದ ಆದೇಶ, ವೇದ ತಿಳಿದವರ ಆಶಯ. *ರುಚಂ ನೋ ಧೇಹಿ ಬ್ರಾಹ್ಮಣೇಷು ರುಚಂ ರಾಜಸು ನಸ್ಕೃಧಿ । ರುಚಂ ವಿಶ್ಯೇಷು ಶೂದ್ರೇಷು ಮಯಿ ಧೇಹಿ ರುಚಾರುಚಮ್ ॥* (ಯಜು.೧೮.೪೮.)

ಈ ಹಿನ್ನೆಲೆಯಲ್ಲಿ ವರ್ಣ-ವರ್ಣಗಳ ನಡುವೆ ಸ್ಪರ್ಧೆಯಿಲ್ಲ, ದಬ್ಬಾಳಿಕೆಯಿಲ್ಲ, ವೈಷಮ್ಯವಿಲ್ಲ. ಇಂತಹ ಕ್ರೂರ ಕಪಿಚೇಷ್ಟೆಗಳಿಗೆ ಕಾರಣರಾದವರು ವೇದಧರ್ಮೀಯರೂ ಅಲ್ಲ. ಜಾತ್ಯತೀತತೆಯೆಂಬುದು ಅಪ್ಪಟ ಸೋಗಲಾಡಿತನ. ಇಂದು ರೂಢಿಯಲ್ಲಿರುವ ಜಾತಿಗಳೇ ಕೃತ್ರಿಮವಾದಾಗ, ಅವುಗಳಿಗೇ ಅಸ್ತಿತ್ವವಿಲ್ಲದಿರುವಾಗ ಅವುಗಳಿಗೆ ಅತೀತವಾಗಿರುವುದಕ್ಕೆ ಅಸ್ತಿತ್ವವೆಲ್ಲಿಯದು?! ಇದೊಂದು ಕಣ್ಣಿಗೆ ಮಣ್ಣೆರಚುವ ರಾಜಕೀಯ, ಮತ-ಧರ್ಮ-ಜಾತಿಗಳ ಕೆಸರಿನಲ್ಲಿ ಹೂತುಹೋಗಿರುವವರ ತಂತ್ರ. ನಾವೆಲ್ಲರೂ ಮಾನವಜಾತಿಗೆ ಸೇರಿದವರೇ. ಮಾನವರಾಗಿ, ಮಾನವೀಯತೆಗೆ ಅತೀತರಾಗಿ ಬದುಕುವುದಾದರೂ ಹೇಗೆ? ಹಾಂ!! ಕೆಲವರು ಮಾನವರೂಪದ ರಾಕ್ಷಸರಾಗಿ, ಹಿಂಸಕರಾಗಿ, ಭ್ರಷ್ಟಾಚಾರಿಗಳಾಗಿ, ಅನಾಚಾರಿಗಳಾಗಿ, ಅತ್ಯಾಚಾರಿಗಳಾಗಿ, ಲಂಚಕೋರರಾಗಿ, ವಂಚಕರಾಗಿ, ಲಂಪಟರಾಗಿ ನಮ್ಮ ನಡುವೆಯೇ ಇದ್ದಾರೆ. ಇವರನ್ನು ಬೇಕಾದರೆ 'ಜಾತ್ಯತೀತರು = ಅಮಾನವೀಯರು' ಎಂದು ಕರೆಯಬಹುದು.

ಮಾನವೀಯತೆಯ ಲಕ್ಷಣಗಳೇ ದಯೆ-ಅನುಕಂಪ, ಸಹಬಾಳ್ವೆ, ಮೈತ್ರೀಭಾವನೆ, ತ್ಯಾಗ, ಧನಾತ್ಮಕಚಿಂತನೆ, ಹಾಸ್ಯ, ಅಧ್ಯಯನ, ಪ್ರಯತ್ನ-ಸಾಧನೆ. ಇದು ಕೇವಲ ಮಾನವರ ವಿಚಾರಕ್ಕಷ್ಟೇ ಅಲ್ಲ ಸಕಲ ಜೀವರಾಶಿಗಳ ವಿಚಾರದಲ್ಲೂ ಇದ್ದಲ್ಲಿ ಅದು ಮಾನವೀಯತೆಯ ಉನ್ನತಮಟ್ಟ.

ನಾವೆಲ್ಲರೂ ಹುಟ್ಟಿನಿಂದಂತೂ ಮಾನವಜಾತಿಗೆ ಸೇರಿದವರೇ ಆಗಿದ್ದೇವೆ. *ಮನುರ್ಭವ ಜನಯಾ ದೈವ್ಯಂ ಜನಮ್ ॥* (ಋಕ್.೧೦.೫೩.೬) - ಮನುಷ್ಯನಾಗು, ಮನನಶೀಲನಾಗು. ಮಾನವರ ಸಂಖ್ಯೆಯನ್ನು ಹೆಚ್ಚಿಸು - ಎಂಬ ವೇದಾದೇಶದಂತೆ ಮಾನವೀಯತೆಯನ್ನು ನಮ್ಮ ಬಾಳಿಗೆ ಇಳಿಸಿಕೊಂಡು, ಇತರರೂ ಇಳಿಸಿಕೊಳ್ಳುವಂತೆ ಪ್ರೇರಣೆ ನೀಡೋಣ.
॥ ಓಂ ಶಾಂತಿಃ ಶಾಂತಿಃ ಶಾಂತಿಃ ॥ ●

ಮಾನವ ಕೋಟಿಯನ್ನು ಉದ್ಧರಿಸುವುದು
ಸಹಕಾರ ಮಾತ್ರ
- ಬರ್‌ಟ್ರಾಂಡ್ ರಸಲ್

ಜಾತ್ಯಾತೀತತೆ ಎಂಬ ಶಬ್ದ ಕಟೆ ಕಟೆಯಲ್ಲಿ ನಿಂತಿರುವ ಕ್ಷಣದಲ್ಲಿ ......

ಡಾ. ಎನ್. ಜಗದೀಶ್ ಕೊಪ್ಪ


ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ ಎಪ್ಪತ್ತು ವರ್ಷಗಳು ಕಳೆದು ಹೋಯಿತು. ದೇಶದುದ್ದಕ್ಕೂ ಅನೇಕ ನದಿಗಳಲ್ಲಿ ನೀರು ಹರಿದು ಬತ್ತಿಹೋಗಿವೆ. ಧರ್ಮ ನಿರಪೇಕ್ಷತೆ, ಜಾತ್ಯತೀತತೆ ಹಾಗೂ ವರ್ಗರಹಿತವಾದ ಮತ್ತು ಯಾವುದೇ ರೀತಿಯ ಅನುಪಾತವಿಲ್ಲದ ಸಮಾನವಾದ ಸಮಾಜ ಇನ್ನೂ ನಮ್ಮ ಪಾಲಿಗೆ ಕನಸಾಗಿದೆ. ಈ ಕುರಿತು ಮಾತನಾಡುವುದು ಅಥವಾ ಬರಿಯುವುದು ಸಹ ಈ ಹೊತ್ತಿನಲ್ಲಿ ದುಗುಡದ ಸಂಗತಿಯಾಗಿದೆ. ಈ ದೇಶಕ್ಕೆ ಹುಟ್ಟಿನಿಂದ ಅಂಟಿಕೊಂಡು ಬಂದಿರುವ ಹಿಂಸೆಯ ಹೀನ ಚರಿತ್ರೆಯೊಂದು ಮಾಯದ ಗಾಯವಾಗಿ ಇನ್ನೂ ಹಸಿ ಹಸಿಯಾಗಿ ಉಳಿದುಕೊಂಡಿದೆ. ೧೯೪೭ ರ ಆಗಸ್ಟ್ ೧೫ ರ ಮಧ್ಯ ರಾತ್ರಿ ಹಿಂಸೆ ಮತ್ತು ಸಾವಿನ ಸೂತಕದಲ್ಲಿ ಸಮಯದಲ್ಲಿ ಭಾರತ ಉದಯವಾಯಿತು. ಭಾರತವೆಂಬ ಉಪಖಂಡವನ್ನು ಅಡ್ಡವಾಗಿ ಸೀಳಿ ಭಾರತ ಮತ್ತು ಪಾಕಿಸ್ತಾನವೆಂದು ವಿಭಜಿಸಿದಾಗ ಶತ ಶತಮಾನಗಳ ಕಾಲ ಒಂದು ಊರಿನಲ್ಲಿ, ಒಂದೇ ಬೀದಿಯಲ್ಲಿ ಹಾಗೂ ನೆರೆಹೊರೆಯಲ್ಲಿ ಅಣ್ಣ ತಮ್ಮಂದಿರಂತೆ ಬದುಕಿ ಬಾಳಿದ್ದ ಹಿಂದೂ-ಮುಸ್ಲಿಂರು ರಾತ್ರೋರಾತ್ರಿ ಪರಸ್ಪರ ಕತ್ತಿ ಹಿರಿದು ಬಡಿದಾಡಿಕೊಂಡರು. ಈ ಅಘಾತಕಾರಿಯಾದ, ಅಮಾನುಷವಾದ ಘಟನೆಯಲ್ಲಿ ಸಂಭವಿಸಿದ ಕೊಲೆ ಮತ್ತು ಅತ್ಯಾಚಾರಕ್ಕೀಡಾದ ನತದೃಷ್ಟರ ಲೆಕ್ಕ ಈವರೆಗೆ ಸಿಗಲಿಲ್ಲ, ಸುಮಾರು ಐವತ್ತೈದು ಲಕ್ಷ ಮಂದಿ ನೆಲೆ ಕಳೆದುಕೊಂಡು ತಾವು ಬದುಕಿ ಬಾಳಿದ ನೆಲದಲ್ಲಿ ಅತಂತ್ರರಾದರು.

ಅಂದು ಹರಿದ ಬಿಸಿನೆತ್ತರಿನ ಹೊಳೆಯಲ್ಲಿ ಮಿಂದೆದ್ದವರು ಭಾರತ ಮತ್ತು ಪಾಕಿಸ್ತಾನ ಎಂದು ರಕ್ತದಲ್ಲಿ ಅದ್ದಿದ ಲೇಖನಿಯಿಂದ ಹೆಸರು ಬರೆದು ನಾಮಕರಣ ಮಾಡಿದರು. ಇಂತಹ ರಕ್ತ ಸಿಕ್ತ ಅಧ್ಯಾಯಗಳನ್ನೊಳಗೊಂಡಿರುವ ಭಾರತದಲ್ಲಾಗಲಿ, ಪಾಕಿಸ್ತಾನದಲ್ಲಾಗಲಿ ಧರ್ಮ ರಹಿತ ಅಥವಾ ಜಾತಿ ರಹಿತ ಸಮಾಜದ ಬಗ್ಗೆ ಕನಸುಕಾಣುವುದು ಕೂಡ ನಿರಾಸೆಯ ಸಂಗತಿಯಾಗಿದೆ.

ತನ್ನ ಜೀವಿತದಲ್ಲಿ ಕನಿಷ್ಟ ಅರ್ಧಶತಮಾನದಷ್ಟು ಕಾಲ ತನ್ನ ದೇಹವನ್ನು ಸ್ವತಃ ದಂಡಿಸಿಕೊಂಡು, ಅಹಿಂಸೆಯ ಮಾರ್ಗದಲ್ಲಿ ಹೋರಾಡುತ್ತಾ; ಗಂಧದ ಕೊರಡಿನಂತೆ ಜೀವತೇಯ್ದ ಮಹಾತ್ಮ ಗಾಂಧಿಯವರು ತಮ್ಮ ಕನಸು ಮನಸ್ಸಿನಲ್ಲಿ ಇಂತಹ ಸ್ವಾತಂತ್ರ್ಯವನ್ನು ಬಯಸಿರಲಿಲ್ಲ. ಈ ಕಾರಣಕ್ಕಾಗಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದಾಗ ಸಂಭ್ರಮಿಸದೆ, ಅವರು ಕಲ್ಕತ್ತ ನಗರದ ಬೀದಿ ಬೀದಿಗಳಲ್ಲಿ ಇಟ್ಟಿಗೆ, ಕಲ್ಲುಗಳಿಂದ ತುಂಬಿ ಹೋಗಿ ಮನುಷ್ಯರ ರಕ್ತದಿಂದ ತೊಯ್ದು ಹೋಗಿದ್ದ ರಸ್ತೆಗಳಲ್ಲಿ ನಡೆಯುತ್ತಾ, ಅನಾಥರ, ಸಂತ್ರಸ್ತರ ಕಣ್ಣೀರಿಗೆ ಕರವಸ್ತ್ರವಾಗುತ್ತಾ, ಅವರೊಳಗೆ ಬೆರೆತು ಅನಾಮಿಕರಂತೆ ಉಳಿದು ಹೋದರು. ಆನಂತರ ಅವರು ಬದುಕಿದ್ದ ಕೇವಲ ಐದೂವರೆ ತಿಂಗಳು ಮಾತ್ರ. ಈ ಅವಧಿಯಲ್ಲಿ ಜಾತ್ಯಾತೀತ ಮತ್ತು ಧರ್ಮಾತೀತ ಸಮಾಜಕ್ಕಾಗಿ ಹಂಬಲಿಸುತ್ತಿದ್ದರು. ನೂರು ವರ್ಷ ಬದುಕುವ ಹಂಬಲ ಹೊತ್ತಿದ್ದ ಗಾಂಧೀಜಿಯವರು ನನಗೆ ಈ ಜನ್ಮ ಸಾಕು ಎನ್ನುವ ಹಂತ ತಲುಪಿದ್ದರು. ಇಂತಹ ಸಂದರ್ಭಕ್ಕಾಗಿ ಕಾಯುತ್ತಿದ್ದ ಹಾಗೂ ಧರ್ಮದ ಅಮಲನ್ನು ನತ್ತಿಗೇರಿಸಿಕೊಂಡಿದ್ದ ಹಂತಕನ ಗುಂಡಿಗೆ ೧೯೪೮ ರ ಜನವರಿ ೩೦ ರಂದು ಎದೆಯೊಡ್ಡಿ ಬಲಿಯಾಗುವುದರು. ಈ ಮೊದಲೇ ರಕ್ತದಿಂದ ತೊಯ್ದು ಹಸಿಯಾಗಿದ್ದ ಭಾರತದ ನೆಲಕ್ಕೆ ತಮ್ಮ ಮೂರು ಹನಿ ನೆತ್ತರನ್ನು ಚೆಲ್ಲುವುದರ ಮೂಲಕ ಇಲ್ಲಿನ ನೆಲವನ್ನು ಮತ್ತಷ್ಟು ಹಸಿಯಾಗಿಸಿ ನಿರ್ಗಮಿಸಿದರು.

ಇಂದು ಗಾಂಧಿಯ ನೆಪದಲ್ಲಿ ಅಹಿಂಸೆಯ ನೆಲೆಯಿಂದ ಜಾತ್ಯಾತೀತ ನಿಲುವನ್ನು, ಬುದ್ಧನ ಹೆಸರಿನಲ್ಲಿ ಶಾಂತಿಯನ್ನು ಮತ್ತು ಬಸವಣ್ಣನ ಸ್ಮರಣೆಯಲ್ಲಿ ವರ್ಗರಹಿತ ಸಮಾಜವೊಂದನ್ನು ನಿರ್ಮಿಸಲಾರದ ಅಸಹಾಯಕತೆಯ ಸ್ಥಿತಿಗೆ ನಾವು ದೂಡಲ್ಪಟ್ಟಿದ್ದೇವೆ. ಜೊತೆಗೆ ಮರಳಿ ಮನುಷ್ಯತ್ವದ ನೆಲೆಗೆ ಹಿಂತಿರುಗಿ ಬರಲಾರದಷ್ಟು ಬಹುದೂರ ಸಾಗಿ ಬಂದಿರುವ ನಾವು ಜಾತಿ ಇಲ್ಲವೆ ಧರ್ಮದ ನೆಪದಲ್ಲಿ ಪರಸ್ಪರ ಇರಿದುಕೊಳ್ಳುತ್ತಾ, ನಮ್ಮ ನಮ್ಮ ಗುಡಿಸಲು ಮತ್ತು ಮನೆಗಳಿಗೆ ಬೆಂಕಿ ಹಚ್ಚಿಕೊಂಡು ಚಳಿ ಕಾಯಿಸುತ್ತಾ ಕೂತಿದ್ದೇವೆ. ಇಂತಹ ಅಮಾನುಷ ಕ್ರಿಯೆಗಳಿಗೆ ದೇಶಭಕ್ತಿ ಎಂತಲೋ ಇಲ್ಲವೆ, ಧರ್ಮ ಜಾಗೃತಿ ಎಂತಲೋ ಹೆಸರಿಟ್ಟಿದ್ದೇವೆ. ಮನೆ ಮತ್ತು ಮನಸ್ಸುಗಳನ್ನು ಹೊಡೆದು ಹಾಕುತ್ತಿರುವವರನ್ನು ಹುತಾತ್ಮರ ಪಟ್ಟಕ್ಕೇರಿಸುತ್ತಿದ್ದೇವೆ. ಭಾರತದಲ್ಲಿ ಧರ್ಮತೀತವಾದ, ಜಾತ್ಯಾತೀತವಾದ ಹಾಗೂ ವರ್ಗರಹಿತ ಸಮಾಜ ಕುರಿತು ಮಾತನಾಡುವವರು ಮತ್ತು ದೇಶಭಕ್ತಿ, ರಾಷ್ಟ್ರೀಯತೆ, ಪ್ರಭುತ್ವ, ಹಿಂದೂರಾಷ್ಟ್ರ ಹೀಗೆ ಅನೇಕ ಪರಿಕಲ್ಪನೆ ಕುರಿತು ಮಾತನಾಡುವವರು ಉತ್ತರ-ದಕ್ಷಿಣವೆಂಬ ಎರಡು ದ್ರುವಗಳಂತೆ ಬದುಕುತ್ತಿದ್ದಾರೆ. ಇವರ ನಡುವಿನ ಸೌಹಾರ್ಧ ಅಥವಾ ಸಂವಹನ ಸೇತುವೆ ಮುರಿದು ಬಿದ್ದು ಹಲವು ದಶಕಗಳು ಉರುಳಿಹೋದವು. ಅತಿ-ರೇಕದ ತುತ್ತ ತುದಿಯೇರಿ ಕುಳಿತಿರುವ ಈ ಎರಡು ಗುಂಪುಗಳಿಗೆ ನಾವು ನಿರ್ಮಿಸಬೇಕಿರುವ ಸಮಾಜ ಹೇಗಿರಬೇಕು? ಎಂಬುದರ ಕುರಿತು ನಿರ್ಧಿಷ್ಟವಾದ ಪರಿಕಲ್ಪನೆ ಇದ್ದಂತಿಲ್ಲ. ಜಾತ್ಯಾತೀತ ಸಮಾಜ ಕುರಿತು ಮಾತನಾಡುವವರು ಕಳೆದ ಮೂರು ದಶಗಳಿಂದ ಈ ದೇಶದ ಸಾಮಾಜಿ-ಕ ಚಳುವಳಿಗಳು ಏಕೆ ವೈಫಲ್ಯ ಕಾಣುತ್ತಿವೆ ಎಂದು ಆತ್ಮಶೋಧನೆಯನ್ನು ಮಾಡಿಕೊಳ್ಳಲು ಪುರುಷೊತ್ತಿಲ್ಲದಂತೆ ಸಮುದ್ರದ ದೈತ್ಯ ಅಲೆಗಳ ಎದುರು ಮರಳಿನ ಗೋಪುರದ ನಿರ್ಮಾಣದಲ್ಲಿ ನಿರತರಾಗಿದ್ದಾರೆ. ಈ ದಿನಮಾನಗಳಲ್ಲಿ ಎಡ ಎಂಬುವುದು ಮಂಪರಿನ ಹಾಗೆ ಬಲ ಎನ್ನುವುದು ಅಮಲಿನ ಹಾಗೆ ಗೋಚರಿಸುತ್ತಿವೆ.

ಇಂದು ಧರ್ಮದ ಸೋಗಿನಲ್ಲಿ ಹುಟ್ಟು ಹಾಕುತ್ತಿರುವ ಹಿಂಸೆಯಾಗಲಿ, ಜಾತಿ ನೆಪದಲ್ಲಿ ಸಮಾಜವನ್ನು ಒಡೆಯುತ್ತಿರುವ ಕ್ರಿಯೆಯಾಗಲಿ ಈ ದೇಶದ ಸಂಸ್ಕೃತಿಯ ಲಕ್ಷಣವಲ್ಲ. ಇಲ್ಲಿ ಸಂಸ್ಕೃತಿ ಎಂದರೆ, ಕೇವಲ ಕಲೆ ಮತ್ತು ಸಾಹಿತ್ಯ ಎಂದು ವ್ಯಾಖ್ಯಾನಗೊಳುತ್ತಿದೆ. ಈ ಸಂದರ್ಭದಲ್ಲಿ ಸಂಸ್ಕೃತಿಯ ಪರಿಧಿಯನ್ನು ಭಾಷೆಗೆ, ಧರ್ಮಕ್ಕೆ ಮತ್ತು ಎಲ್ಲಾ ವರ್ಗದ ಹಾಗೂ ಎಲ್ಲಾ ಜಾತಿಯ ಸಮುದಾಯಗಳು ಒಳಗೊಂಡಿರುವ ಆಚಾರ, ವಿಚಾರ, ಅವರ ಆಹಾರ, ಉಡುಗೆ, ಬದುಕಿನ ಕ್ರಮ ಹೀಗೆ ಎಲ್ಲದಕ್ಕೂ ವಿಸ್ತರಿಸಬೇಕಿದೆ. ಜಾಗತೀರಣದ ಸವಲತ್ತುಗಳನ್ನು ಅತಿ ಸಂಭ್ರಮದಿಂದ ಅಪ್ಪಿಕೊಂಡಿರುವ ಮೇಲ್ವರ್ಗದ ಹಾಗೂ ಮಧ್ಯಮ ವರ್ಗದ ಜನ ಇಂದಿನ ಕ್ರೌರ್ಯ, ಹಿಂಸೆ ಮತ್ತು ಮತೀಯವಾದ ಹಾಗೂ ಕೋಮುವಾದಕ್ಕೆ ಪರೋಕ್ಷವಾಗಿ ಕಾರಣ-ರಾಗುತ್ತಿದ್ದಾರೆ. ದೇಶದುದ್ದಕ್ಕೂ ಎಲ್ಲಾ ಜಾತಿಗಳು ಪುನಃ ಬಲಗೊಳ್ಳುತ್ತಿವೆ. ಇದಕ್ಕೆ ಪೂರಕವಾಗಿ ಮತ ಬ್ಯಾಂಕ್ ರಾಜಕಾರಣದಲ್ಲಿ ದೇಶದ ಎರಡು ರಾಜಕೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಸೇರಿದಂತೆ ಬಹುತೇಕ ಪ್ರಾದೇಶಿಕ ಪಕ್ಷಗಳು ಸಕ್ರಿಯವಾಗಿವೆ. ಜಾತಿಯ ಹೆಸರಿನಲ್ಲಿ ಎಲ್ಲರನ್ನು ಹತ್ತೊಂಬತ್ತನೆಯ ಶತಮಾನದ ಮೌಢ್ಯ ಮತ್ತು ಜಾತಿಯ ಶ್ರೇಣಿಕೃತ ಸಮಾಜದ ಭಾರತಕ್ಕೆ ನಮ್ಮನ್ನು ಕೊಂಡೊಯ್ಯುತ್ತಿವೆ. ಇಂತಹ ಅಪಾಯಕಾರಿ ಸಂಗತಿಗಳ ಕುರಿತಂತೆ ನಮಗೆ ಸಾಂಸ್ಕೃತಿಕ ಎಚ್ಚರವಿಲ್ಲದಿದ್ದರೆ " ಜಾತ್ಯತೀತ" ಎಂಬ ಶಬ್ದವನ್ನು ನಾವು ಶಬ್ದಕೋಶದಿಂದ ಅಳಿಸಿಹಾಕುವ ದಿನ ದೂರವಿಲ್ಲ. ●



ಗಾಂಧಿ ಮತ್ತು ಜಾತ್ಯತೀತತೆ

–ಸುಗಿತನಯ

ಹತ್ತೊಂಭತ್ತನೇ ಶತಮಾನದ ಮಧ್ಯದವರೆಗೂ ಪಶ್ಚಿಮದಲ್ಲಿ ಸೆಕ್ಯುಲರ್ ಎಂಬ ಶಬ್ದವನ್ನು ಪುರೋಹಿತಶಾಹಿ ವರ್ಗದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಲು ಬಳಸಲಾಗುತ್ತಿತ್ತು. ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಈ ಶಬ್ದದ ಬಳಕೆ ರಾಜಕೀಯವಾಗಿ ಬಳಕೆಗೆ ಬಂತು. ಜಾಗತಿಕವಾಗಿ ಪ್ರಜಾಪ್ರಭುತ್ವ ಮಾದರಿಯ ಸರ್ಕಾರಗಳು ಸ್ಥಾಪನೆಗೊಳ್ಳುತ್ತಾ ಹೋದಂತೆ ಈ ಶಬ್ದದ ರಾಜಕೀಯ ಉಪಯೋಗ ಹೆಚ್ಚುತ್ತಾ ಹೋಯಿತು.

೧೯೨೮ರಲ್ಲಿ ಮೋತಿಲಾಲ ನೆಹರು ಅವರ ನೇತ್ರತ್ವದಲ್ಲಿ ಭಾರತೀಯ ಸಂವಿಧಾನದ ತತ್ವವನ್ನು ರೂಪಿಸಲು ರಚನೆಯಾಗಿದ್ದ ಸಮಿತಿಯು ಎಲ್ಲೂ ಜಾತ್ಯತೀತತೆ ಎಂಬ ಶಬ್ದವನ್ನು ಬಳಸಿಲ್ಲ. ಆದರೆ ಸಮಿತಿಯ ವರದಿಯು ಜಾತ್ಯತೀತತೆಯ ವಿಚಾರಗಳಿಗೆ ಬಹಳ ಹತ್ತಿರವಾಗಿದೆ. ಗಾಂಧಿ, ಜವಹರ್‌ಲಾಲ್, ಮೌಲಾನಾ ಅಜಾದ್ ಮುಂತಾದವು ಭಾಗವಹಿಸಿದ್ದ ಕರಾಚಿ ಘೋಷಣೆಯಲ್ಲಿ ಪ್ರಭುತ್ವವು ಧಾರ್ಮಿಕ ಅಲಿಪ್ತತೆಯನ್ನು ಹೊಂದಿರಬೇಕೆಂಬುದನ್ನು ಪ್ರಸ್ತಾಪಿಸಿದರೂ ಜಾತ್ಯತೀತ ಶಬ್ದದ ಬಳಕೆಯಾಗಿಲ್ಲ.

೧೯೩೩ ರನಂತರ ಗಾಂಧಿಯವರ ಬರಹಗಳಲ್ಲಿ ಮತ್ತು ಭಾಷಣಗಳಲ್ಲಿ ಸೆಕ್ಯುಲರ್ ಶಬ್ದ ಬಳಕೆಯಾಗಿರುವುದು ಕಂಡು ಬರುತ್ತದೆ. ೧೯೩೩ ರಲ್ಲಿ ಎರಡು ಮಸೂದೆಗಳು ಕೇಂದ್ರ ಶಾಸನ ಸಭೆಯ ಮುಂದೆ ಬಂದಿತ್ತು. ಅದರಲ್ಲಿ ಒಂದು ಅಸ್ಪ್ರಶ್ಯತೆಗೆ ಸಂಬಂಧಿಸಿದ್ದಾಗಿತ್ತು. ಗಾಂಧಿಯವರು ಆ ಮಸೂದೆಯನ್ನು ಬೆಂಬಲಿಸಿ ಮಾನವಕೋಟಿಯ ನೈತಿಕತೆಗೆ ವಿರುದ್ಧವಾಗಿರುವ ಅಸ್ಪಶ್ಯುತೆ ನಿವಾರಣೆಯ ಕಾನೂನಿನ ಕರಡನ್ನು ಬೆಂಬಲಿಸಿ ಹೇಳಿಕೆ ನೀಡಿದ್ದರು. ಅಸ್ಪ್ರಶ್ಯತೆಯಂತಹ ಆಚರಣೆಗೆ ಜಾತ್ಯತೀತ ನಿಲುವಿನ ಪ್ರಭುತ್ವದ ಅನುಮತಿ ದೊರೆಯಬಾರದು ಎಂದರು. ಮೇಲಿನ ಮಸೂದೆಗೆ ಸಂಬಂಧಿಸಿದಂತೆ ಸರ್ಕಾರದ ಕಾನೂನಿನ ಈ ಕ್ರಮವು ಧಾರ್ಮಿಕ ಆಚರಣೆಯಲ್ಲಿ ಅನಗತ್ಯವಾಗಿ ಕೈ ಆಡಿಸಲು ನೆರವಾಗಿದೆ ಎಂಬ ಆಪಾದನೆಗಳು ಬಂದವು. ಆಗ ಅವರು ಇದು ಧರ್ಮಕ್ಕೆ ಸಂಬಂಧಿಸಿದ ವಿಚಾರವಾದರೂ, ಹಲವು ವಿಶೇಷ ಪ್ರಕರಣಗಳಲ್ಲಿ ಪ್ರಭುತ್ವವು ಹಸ್ತಕ್ಷೇಪ ಮಾಡುವುದು ಅನಿವಾರ್ಯವಾಗಿ ಬಿಡುತ್ತದೆ ಎಂದು ಹೇಳಿಕೆ ನೀಡಿದರು.

ಜನವರಿ ೧೯೩೫ರಲ್ಲಿ ಕೇಂದ್ರೀಯ ಶಾಸನ ಸಭೆಯ ಕೆಲ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಾ ಸಮಿತಿಯ ಎಲ್ಲ ಹಿಂದೂ ಸದಸ್ಯರು ಅಸ್ಪ್ರಶ್ಯತೆಯ ಆಚರಣೆ ಪರವಾಗಿ ನಿಂತರೂ ಜಾತ್ಯತೀತ ಶಾಸನ ಸಭೆಯು ಆ ದೃಷ್ಟಿಕೋನವನ್ನು ಸಹಿಸಬಾರದು ಎಂದು ಸಲಹೆ ನೀಡುತ್ತಾರೆ. ೧೯೪೨ ಜನವರಿ ೨೦ ರಂದು ಪಾಕಿಸ್ತಾನ ರಚನೆಯ ಬಗ್ಗೆ ಚರ್ಚಿಸುವಾಗ 'ಹಿಂದೂ ಮತ್ತು ಮುಸುಲ್ಮಾನರಲ್ಲಿ ಧರ್ಮದ ಆಚರಣೆಯ ಬಗೆಗಿನ ಭಿನ್ನಾಭಿಯ ಒಂದನ್ನು ಬಿಟ್ಟು ಕಂದಾಯ, ನೈರ್ಮಲ್ಯ, ಪೊಲೀಸು, ನ್ಯಾಯ ಮತ್ತು ಇತರ ಸಾರ್ವಜನಿಕ ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯ ಇರಲು ಸಾಧ್ಯವೇ ? ಆದರಲ್ಲಿ ಜಾತ್ಯತೀತ ಸರ್ಕಾರಕ್ಕೆ ಯಾವುದೇ ಆಸಕ್ತಿ ಇರಬಾರದು ಎನ್ನುತ್ತಾರೆ. ಈ ಮಾತನ್ನು ಗಾಂಧಿ ಸ್ವಾತಂತ್ರ್ಯ ದ ನಂತರ ಸಂವಿಧಾನದ ರಚನೆಯು ಪ್ರಾರಂಭವಾದ ನಂತರವೂ ಪ್ರಸ್ತಾಪಿಸುತ್ತಲೇ ಇದ್ದರು.

೧೯೪೬ ರ ಸೆಪ್ಟೆಂಬರ್ ನಲ್ಲಿ ಗಾಂಧಿ ಒಬ್ಬ ಕ್ರಿಶ್ಚಿಯನ್ ಮತ ಪ್ರಚಾರಕನೊಂದಿಗೆ ಮಾತನಾಡುತ್ತ " ನಾನೇನಾದರು ,ಸರ್ವಾಧಿಕಾರಿಯಾದರೆ, ಅಲ್ಲಿ ಧರ್ಮ ಮತ್ತು ಪ್ರಭುತ್ವ ಪ್ರತ್ಯೇಕವಾಗಿ ಇರುತ್ತವೆ. ಈ ಮಾತನ್ನು ನಾನು ನನ್ನ ಧರ್ಮದ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ. ನಾನು ಅದಕ್ಕಾಗಿ ನನ್ನ ಪ್ರಾಣವನ್ನೇ ಕೊಟ್ಟೇನು. ಆದರೆ ನನ್ನ ಖಾಸಗಿ ವಿಷಯಕ್ಕೂ ಪ್ರಭುತ್ವಕ್ಕೂ ಸಂಬಂಧವಿಲ್ಲ. ಪ್ರಭುತ್ವಕ್ಕೂ ಧರ್ಮ ಪಾಲನೆಗೂ ಸಂಬಂಧವಿಲ್ಲ. ಪ್ರಭುತ್ವವು ಜಾತ್ಯತೀತ ಕಲ್ಯಾಣ, ಆರೋಗ್ಯ, ಸಂಪರ್ಕ, ವಿದೇಶ ನೀತಿ, ಹಣಕಾಸು ಮುಂತಾದವನ್ನು ನೋಡಿಕೊಳ್ಳಬೇಕೆ ವಿನ: ಧರ್ಮವನ್ನಲ್ಲ. ಧರ್ಮದ ವಿಚಾರ ವ್ಯಕ್ತಿಗತ ಕಾಳಜಿ"

೧೯೪೭ರ ಆಗಸ್ಟ್ ೧೬ ರಂದು ಕಲ್ಕತ್ತಾದ ಸ್ಕಾಟಿಶ್ ಚರ್ಚಿನ ಕಾಲೇಜಿನ ರೆ.ಕೆಲ್ಲಸ್ ಅವರೊಂದಿಗೆ ಮಾತನಾಡಿದ್ದು ಆಗಸ್ಟ್ ೨೪ರ ಹರಿಜನ ಪತ್ರಿಕೆಯಲ್ಲಿ ಹೀಗೆ ವರದಿಯಾಗಿದೆ 'ಪ್ರಭುತ್ವವು ಜಾತ್ಯತೀತವಾಗಿರಬೇಕು. ಅದು ಧರ್ಮಗಳಿಗೆ ಅನುಗುಣವಾಗಿ ಶಿಕ್ಷಣವನ್ನು ನೀಡಲು ಸಾರ್ವಜನಿಕ ಹಣವನ್ನು ಬಳಸಬಾರದು. ಎಲ್ಲಿಯವರಗೆ ಪ್ರಜೆಗಳು ದೇಶದ ಕಾನೂನನ್ನು ಪಾಲಿಸುತ್ತಾರೋ ಅಲ್ಲಿಯವರಗೆ ಅವರಿಗೆ ತಮ್ಮ ಧರ್ಮವನ್ನು ಆಚರಿಸಲು ಯಾವುದೇ ಅಡಚಣೆ ಇರಬಾರದು. ಕ್ರಿಶ್ಚಿಯನ್ನ ಧರ್ಮ ಸಂಸ್ಥೆಗಳ ಕೆಲಸ ಕಾರ್ಯಗಳಿಗೆ ಯಾವುದೇ ಅಡ್ಡಿ ಇರಬಾರದು. ಆದರೆ ಆ ಸಂಸ್ಥೆಗಳಿಗೆ ಸ್ವಾತಂತ್ರ ಪೂರ್ವದಲ್ಲಿದ್ದಂತೆ ಪ್ರಭುತ್ವದ ಆಶ್ರಯ ದೊರಕಬಾರದು' ಈ ತಿಳವಳಿಕೆಯು ಸಂವಿಧಾನದ ಅನುಚ್ಛೇದ ೨೫, ೨೬ ಮತ್ತು ೨೭ ರಲ್ಲಿ ಪ್ರತಿಫಲಿಸಿದೆ.

ಈ ಮಾತನ್ನು ಹೇಳಿದ ಮಾರನೆಯ ದಿನ ಅಂದರೆ ಆಗಸ್ಟ್ ೧೭ರಂದು ಮತ್ತೊಂದು ಕಡೆ ಮಾತನಾಡುವಾಗ 'ಈ ದೇಶದ ಎಲ್ಲ ನಾಗರಿಕರು ಧರ್ಮಾತೀತವಾಗಿ ಸಮಾನತೆಯ ಹಕ್ಕನ್ನು ಪಡೆಯುತ್ತಾನೆ. ಯಾವುದೇ ಧಾರ್ಮಿಕ ಸಂಸ್ಥೆಗೂ ಪ್ರಭುತ್ವವು ಸವಲತ್ತುಗಳನ್ನು ನೀಡಬಾರದು ಎನ್ನುತ್ತಾರೆ. ಕಾನೂನಿನ ದೃಷ್ಟಿಯಲ್ಲಿ ಎಲ್ಲ ನಾಗರಿಕರು ಸಮಾನರು ಎನ್ನುತ್ತಾರೆ.

ಅದೇ ಸಮಯದಲ್ಲಿ ಆಗಸ್ಟ್ ೨೨ ರಂದು ಕಲ್ಕತ್ತಾದ ದೇಶಬಂಧು ಪಾರ್ಕನಲ್ಲಿ ಮಾತನಾಡುತ್ತಾ 'ಧರ್ಮ ಎಂಬುದು ವೈಯುಕ್ತಿಕ ವಿಷಯ ಮತ್ತು ಆ ವಿಷಯವನ್ನು ಕೇವಲ ನಮ್ಮ ವೈಯುಕ್ತಿಕ ನೆಲೆಗಷ್ಟೇ ಸೀಮಿತಗೊಳಿಸಿಕೊಂಡರೆ ನಮ್ಮ ರಾಜಕೀಯ ಬದುಕು

ಸ್ವಷ್ಟವಾಗಿರುತ್ತದೆ. ಸಾರ್ವಜನಿಕ ಬದುಕಿನಲ್ಲಿರುವವರು, ಅಧಿಕಾರಿಗಳು ಸಂಪೂರ್ಣ ಮನಸ್ಸಿನಿಂದ ಜಾತ್ಯತೀತ ಪ್ರಭುತ್ವದ ನಿರ್ಮಾಣಕ್ಕೆ ಕೆಲಸಮಾಡಿದರಷ್ಟೇ ನಾವು ನವ ಭಾರತವನ್ನು ನಿರ್ಮಾಣ ಮಾಡಬಹುದು ಮತ್ತು ಘನತೆವೆತ್ತ ದೇಶವನ್ನಾಗಿ ಮಾಡಬಹುದು' ಎನ್ನುತ್ತಾರೆ.

ನವೆಂಬರ ೧೫ ರಂದು ರಾಷ್ಟ್ರೀಯ ಕಾಂಗ್ರೆಸ್ ಸಮಿತಿಯು ಅಲ್ಪ ಸಂಖ್ಯಾತರು, ದೇಶ ವಿಭಜನೆಯ ನಿರಾಶ್ರಿತರು ಮತ್ತು ಇತರ ವಿಷಯಗಳ ಬಗ್ಗೆ ಅನೇಕ ಠರಾವುಗಳನ್ನು ಕೈಗೊಂಡಿತು. ಅದರಲ್ಲಿ ' ನಾಗರಿಕರೆಲ್ಲರಿಗೂ ಸರ್ವ ಸಮಾನಾದ ಹಕ್ಕುಳ್ಳ ಪ್ರಜಾತಾಂತ್ರಿಕ ಜಾತ್ಯತೀತ ರಾಷ್ಟ್ರ ನಿರ್ಮಾಣ ಮಾಡುವುದು ಕಾಂಗ್ರೆಸ್ಸಿನ ಉದ್ದೇಶ ಎಂದು ಠರಾವು ಮಂಡಿತವಾಯಿತು. ಗಾಂಧಿ ಈ ಠರಾವನ್ನು ಹೃದಯಪೂರ್ವಕವಾಗಿ ಸ್ವಾಗತಿಸಿದರು.

ನವೆಂಬರ್ ೨೮ , ೧೯೪೭ ರಂದು ಗುರುನಾನಕರ ಜನ್ಮದಿನದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಸೋಮನಾಥ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಸರ್ಕಾರದ ಹಣವನ್ನು ಬಳಸುವ ವಿಚಾರವನ್ನು ತೀವ್ರವಾಗಿ ಖಂಡಿಸಿದರು. 'ನಾವು ಎಲ್ಲರಿಗಾಗಿ ಸರ್ಕಾರವನ್ನು ರಚಿಸಿದ್ದೇವೆ. ಇದು ಜಾತ್ಯತೀತ ಸರ್ಕಾರ, ಇದು ಧರ್ಮಾಧಾರಿತ ಸರ್ಕಾರವಲ್ಲ. ಇದು ಯಾವುದೇ ಧರ್ಮಕ್ಕೆ ಸೇರಿದ ಸರ್ಕಾರವಲ್ಲ. ಹಾಗಾಗಿ ಧರ್ಮದ ಆಧಾರದ ಮೇಲೆ ಹಣ ವ್ಯಯಿಸುವುದು ಸಲ್ಲದು ಎಂದಿದ್ದಾರೆ .

ಜಾತ್ಯತೀತ ನಿಲುವಿನ ಸರ್ಕಾರ ನಡೆಯಲು ಸಮಾಜದ ಸಮರ್ಥನೆಯು ಬಹಳ ಮುಖ್ಯ ಎಂದು ಗಾಂಧಿ ತಿಳಿದಿದ್ದರು. ಅವರು ಸಹಜವಾಗಿ ಒಂದು ಜಾತ್ಯತೀತ ಸರ್ಕಾರಕ್ಕೂ ಮಾನವೀಯ ಅಂಶಗಳಿಗೂ ಇರುವ ಚಾರಿತ್ರಿಕ ಮತ್ತು ಸಾಮಾಜಿಕ ಸಂಬಂಧವನ್ನು ಗುರುತಿಸಿದರು.

ಆದರೆ ೧೯೪೮ ರ ನಂತರ ಈ ಅಂಶವನ್ನು ಕಡೆಗಣಿಸಲಾಯಿತು ಮತ್ತು ಹಿಂದುತ್ವದ ಶಕ್ತಿಗಳಿಗೆ ಬೆಳೆಯಲು ಅವಕಾಶಗಳು ದೊರೆತವು. ಗಾಂಧಿ ತಮ್ಮ ಹತ್ಯೆಯಾಗುವ ಆರು ದಿನಗಳ ಮುಂಚೆ 'ವ್ಯವಸ್ಥಿತವಾಗಿ ರೂಪುಗೊಂಡ ರಚನಾತ್ಮಕ ಕಾರ್ಯಕರ್ತರ ಪಡೆಯೊಂದು ಜಾತ್ಯತೀತ ಸಮಾಜದ ನಿರ್ಮಾಣಕ್ಕೆ ರಚನೆಯಾಗಬೇಕಿದೆ. ಸಮಾಜದ ಸೇವೆ ಅವರ ಗುರಿಯಾಗಿರಬೇಕು ಮತ್ತು ಅವರ ಕೆಲಸದ ಯೋಗ್ಯತೆಯು ಅವರ ನಡತೆಯೇ ತೀರ್ಮಾನಿಸುತ್ತದೆ. ಸರ್ಕಾರ ಮತ್ತು ಮಂತ್ರಿಗಳು ಈ ರಚನಾತ್ಮಕ ಕಾರ್ಯಕರ್ತರಿಂದ ಪ್ರೇರಣೆ ಪಡೆದು ಜಾತ್ಯತೀತ ಸರ್ಕಾರ ನಡೆಯುವಂತಾಗಬೇಕು ಎಂದಿದ್ದಾರೆ.

ನಾವು ಈ ಹೇಳಿಕೆ ಇಂದ ಎಷ್ಟೊಂದು ದೂರ ಬಂದು ಬಿಟ್ಟದ್ದೇವೆ ! •

ಮಾಹಿತಿ: ವಿವಿಧ ಮೂಲಗಳಿಂದ

ಇನ್ನೂ ನನಸಾಗದ ಸಂಕಲ್ಪ

–ಎಂ.ರಾಜು

ಜಾತ್ಯತೀತತೆ ಅಥವಾ ಧರ್ಮನಿರಪೇಕ್ಷತೆ ಎಂದರೆ ರಾಜ್ಯಾಧಿಕಾರವು ಧರ್ಮದಿಂದ ಬೇರ್ಪಟ್ಟಿರುವ ಒಂದು ಸ್ಥಿತಿ. ಧರ್ಮವು ಸರ್ಕಾರವನ್ನು ಪ್ರಭಾವಿಸದೆ ಇರುವಂತಹ ಒಂದು ಸಾಮಾಜಿಕ ವ್ಯವಸ್ಥೆ, ಧರ್ಮವು ಸರ್ಕಾರವನ್ನು ಪ್ರಭಾವಿಸಬಾರದು ಎಂಬ ನಂಬಿಕೆ ಎಂಬುದು ಸಾಮಾನ್ಯ ತಿಳಿವಳಿಕೆ. ಆದರೆ ಭಾರತ ಸಂದರ್ಭದಲ್ಲಿ ಕ್ರಿಯಾಶೀಲವಾಗಿರುವ ಹಲವು ಧರ್ಮಗಳಿಂದ ರಾಜ್ಯಾಧಿಕಾರವು ಸಮಾನವಾಗಿ ಅಂತರವನ್ನು ಕಾಯ್ದುಕೊಳ್ಳುವುದು ಅಥವಾ ತಟಸ್ಥವಾಗಿರುವುದು ಎಂಬರ್ಥದಲ್ಲಿ ಈ ಪರಿಕಲ್ಪನೆಯನ್ನು ಪರಿಭಾವಿಸಲಾಗಿದೆ.

ಯುರೋಪಿನಲ್ಲಿ ನಡೆದ ಚರ್ಚ್ ಮತ್ತು ಅರಸೊತ್ತಿಗೆಯ ನಡುವೆ ನಡೆದ ಘರ್ಷಣೆ, ಪುನರುಜ್ಜೀವನ, ವೈಜ್ಞಾನಿಕ ಕ್ರಾಂತಿ, ಬಂಡವಾಳದ ಬೆಳವಣಿಗೆ, ಜ್ಞಾನಯುಗ, ಮೊದಲಾದ ಚಳುವಳಿಗಳು ಮುಖ್ಯವಾದವು. ಆದರೆ ಪಾಶ್ಚಮಾತ್ಯ ರಾಷ್ಟ್ರಗಳಲ್ಲಿ ಅಲ್ಲಿನ ಐತಿಹಾಸಿಕ, ಸಾಮಾಜಿ-ಕ ಪರಿಸ್ಥಿತಿಗೆ ಅನುಗುಣವಾಗಿ ಹುಟ್ಟಿಕೊಂಡ ಪರಿಕಲ್ಪನೆಯೊಂದನ್ನು ಅದೇ ಅರ್ಥ ಮತ್ತು ರೂಪಗಳಲ್ಲಿ ಭಾರತಕ್ಕೆ ಅನ್ವಯಿಸುವುದು ಅರ್ಥಹೀನವಾಗುತ್ತದೆ.

ಭಾರತದ ಸಂವಿಧಾನ ರಚನಾ ಸಭೆಯ ಚರ್ಚೆಗಳಲ್ಲಿ ಜಾತ್ಯತೀತತೆ ಅಥವಾ ಧರ್ಮನಿರಪೇಕ್ಷತೆಯ ತತ್ವವನ್ನು ಕುರಿತು ವಿವರವಾಗಿ ಚರ್ಚಿಸಲಾಗಿದೆ. ಧರ್ಮ ಹಾಗೂ ಸಂಸ್ಕೃತಿಗಳಿಗೆ ಮುಕ್ತ ವಾತಾವರಣವಿದ್ದು ರಾಜ್ಯವು ಅವುಗಳಿಗೆ ರಕ್ಷಣೆ ನೀಡಬೇಕು. ಅದುವೇ ಧರ್ಮ ನಿರಪೇಕ್ಷತೆ ಎಂಬ ಅಭಿಪ್ರಾಯವು ಸ್ವೀಕೃತವಾಗಿದೆ. ರಾಜ್ಯಾಧಿಕಾರದ ಮೂಲ ಜನತೆ ಮಾತ್ರ ಎಮಬುದು ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಸೂಚಿಸಲ್ಪಟ್ಟಿದೆ. ಭಾರತದ ಸಂವಿಧಾನವು ಧರ್ಮ ಪ್ರಚಾರದ ಸ್ವಾತಂತ್ರ್ಯ, ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳುವ ಸ್ವಾತಂತ್ರ್ಯವನ್ನು ಜನರಿಗೆ ನೀಡುತ್ತದೆ. ಮತ ಧರ್ಮದ ಆಧಾರದ ಮೇಲೆ ಭೇಧಭಾವ ಮಾಡುವುದನ್ನು

ಸಂವಿಧಾನವು ನಿಷೇಧಿಸುತ್ತದೆ. ಅಲ್ಪ ಸಂಖ್ಯಾತರಿಗೆ ಶೀಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳುವ ಹಕ್ಕನ್ನು ಸಹ ಸಂವಿಧಾನವು ನೀಡುತ್ತದೆ. ಭಾರತ ಸಂವಿಧಾನ ರಚನಾಸಭೆಯ ಹಲವಾರು ಸದಸ್ಯರು ಶುದ್ಧ ಧರ್ಮನಿರಪೇಕ್ಷತೆಯ ಸ್ಫೂರ್ತಿಯಿಲ್ಲದ ಮತೀಯವಾದಿಗಳೇ ಆಗಿದ್ದುದರಿಂದ ಧರ್ಮಾಚರಣೆಯನ್ನು ವೈಯುಕ್ತಿಕ ಸಂಗತಿಯಾಗಿ ಮಿತಿಗೊಳಿಸದೆ ಸಾರ್ವಜನಿಕವಾಗಿ ಆಚ-ರಿಸುವ ಸ್ವಾತಂತ್ರ್ಯವನ್ನು ನೀಡುವ ಮೂಲಕ ಮುಂದಿನ ದಿನಗಳಲ್ಲಿ ಉಂಟಾದ ಸಾಮಾಜಿ-ಕ ಅನಾಹುತಗಳಿಗೆ ಕಾರಣರಾದರು ಎನ್ನಬಹುದು. ಧಾರ್ಮಿಕತೆಯು ಕೋಮುವಾದವಾಗಿ ರಾಜಕೀಯ ಅಧಿಕಾರ ಗ್ರಹಣದ ಅಸ್ತ್ರವಾಗಿ ಬಳಕೆಯಾಗಬಹುದಾದ ಸಾಧ್ಯತೆಯನ್ನು ಅವರು ಮುಂಗಾಣದೆ ಹೋದ ಪರಿಣಾಮವನ್ನು ಪ್ರಸ್ತುತ ಸಮಾಜವು ಎದುರಿಸುತ್ತಿದೆ ಎಂದು ತಿಳಿಯಬಹುದು.

ಅನಾದಿಕಾಲದಿಂದಲೂ ಭಾರತದ ಸಾಮುದಾಯಿಕ ಸಂಕಲ್ಪವು ಧಾರ್ಮಿಕವೇ ಆಗಿದ್ದು, ಜಾತ್ಯತೀತತೆ ಅಥವಾ ಧರ್ಮನಿರಪೇಕ್ಷತೆ ಎಂಬ ಭೌದ್ಧಿಕ ಪರಿಕಲ್ಪನೆಯು ಭಾರತೀಯ ಮನಸ್ಸಿಗೆ ಒಂದು ಪರಕೀಯ ಸಂಗತಿಯಾಗೇ ಉಳಿದುಕೊಂಡಿದೆ. ಧರ್ಮನಿರಪೇಕ್ಷತೆಯನ್ನು ಜನಮಾನಸದಲ್ಲಿ ಬೇರೂರುವಂತೆ ಮಾಡುವಲ್ಲಿ ರಕ್ತಗತವಾಗುವಂತೆ ಮಾಡುವಲ್ಲಿ, ಭಾರತದಂತಹ ಒಂದು ಬಹು ಸಾಂಸ್ಕೃತಿಕ ದೇಶದಲ್ಲಿ ಪ್ರಜಾಪ್ರಭುತ್ವವು ನೆಲೆಗೊಳ್ಳುವುದಕ್ಕೆ, ಸಾಮಾಜಿಕ, ಆರ್ಥಿಕ, ಮತ್ತು ಇತರೆ ಹಲವಾರು ರಂಗಗಳಲ್ಲಿ ಶಕ್ತಿಯುತವಾಗಿ ಬೆಳೆಯುವುದಕ್ಕೆ ಧರ್ಮನಿರಪೇಕ್ಷತೆ ಎಷ್ಟು ಮುಖ್ಯ ಎಂಬುದನ್ನು ಮನಗಾಣಿಸುವಲ್ಲಿ ನಾವು ಸೋತಿದ್ದೇವೆ. ಸ್ವಾತಂತ್ರ್ಯಾನಂತರದಲ್ಲಿ ಧರ್ಮನಿರಪೇಕ್ಷತೆಯನ್ನು ಒಂದು ಮೌಲ್ಯವಾಗಿ ಸ್ವೀಕರಿಸಿದ್ದಷ್ಟೇ ಹೊರತು ಧರ್ಮನಿರಪೇಕ್ಷತೆಯ ಸಾರ್ವಜನಿಕ ಸಂಸ್ಕೃತಿಯನ್ನು ರೂಪಿಸುವ ಕೆಲಸವನ್ನು ಸರ್ಕಾರವು ಮಾಡಿಲ್ಲ. ಧರ್ಮದ ಬಗ್ಗೆ ವಿಮರ್ಶಾತ್ಮಕ ಮನೋಭಾವವನ್ನು ಅವು ಬೆಳೆಸಲಿಲ್ಲ. ಇದೊಂದು ಸ್ವಾತಂತ್ರ್ಯೋತ್ತರ ರಾಜ-ಕಾರಣದ ವೈಫಲ್ಯವೇ ಆಗಿದೆ.

ಧರ್ಮನಿರಪೇಕ್ಷತೆ ಎಂಬ ಪರಿಕಲ್ಪನೆಯ ಐತಿಹಾಸಿಕ, ತಾತ್ವಿಕ, ಸಾಮಾಜಿಕ ಹಿನ್ನಲೆಗಳೇನೇ ಇದ್ದರೂ, ಆಧುನಿಕ ನಾಗರೀಕತೆಯ ವಿಕಾಸದ ಒಂದು ಹಂತದಲ್ಲಿ ಪಡಿಮೂಡಿದ ಈ ಪರಿಕಲ್ಪನೆಯನ್ನು ಆಧುನಿಕ ಜಗತ್ತು ಒಂದು ಮೌಲ್ಯವಾಗಿ ಸ್ವೀಕರಿಸಿ ಹಲವಾರು ದಶಕಗಳು ಸಂದಿವೆ. ಈ ಪರಿಕಲ್ಪನೆಯನ್ನು ಒಂದು ಉದಾತ್ತ ಆಶಯವಾಗಿ ಸ್ವೀಕರಿಸಿರುವ ಭಾರತವು, ನಿಜಾರ್ಥದಲ್ಲಿ ಈ ಮೌಲ್ಯವನ್ನು ಅಂತಸ್ಥಗೊಳಿಸಿಕೊಳ್ಳಲು ಪ್ರಾಮಾಣಿಕವಾಗಿ ಪ್ರಯತ್ನ ನಡೆಸದೇ ಹೋದದ್ದರಿಂದ ಇಂದು ಒಂದು ನಾಗರಿಕ ಸಮಾಜವಾಗಿ ಉಳಿಯುವ, ಬೆಳೆಯುವ ಸಾಧ್ಯತೆಗಳನ್ನೇ ನಾಶಮಾಡಿಕೊಳ್ಳುತ್ತಿದೆ.

ಇಂದು ಅತಿಯಾದ ಧಾರ್ಮಿಕ ಹಿಡಿತಕ್ಕೆ ಒಳಗಾಗಿರುವ ದೇಶಗಳು ಯಾವುವು ಎಂಬುದನ್ನು ತಿಳಿಯ ಬಯಸಿದರೆ ನಮಗೆ ದೊರೆಯುವ ದೇಶಗಳ ಪಟ್ಟಿಯಲ್ಲಿ ದಕ್ಷಿಣ ಆಫ್ರಿಕಾದ ಅತ್ಯಂತ ಹಿಂದುಳಿದ ದೇಶಗಳಾದ ಇಥಿಯೋಪಿಯಾ, ಮಲಾವಿ, ನೈಜಿರ್, ಯಮನ್ ಬುರೂಡಿ, ಸೋಮಾಲಿಯಾದ ಹೆಸರುಗಳು ಪ್ರಧಾನವಾಗಿ ಕಂಡುಬರುತ್ತದೆ. ಚೈನಾ, ಜಪಾನ್, ಡಿ.ಕೆ.ಪ್ರಾನ್ಸ್, ಆಸ್ಟ್ರೇಲಿಯಾ, ಅಮೇರಿಕಾದಂತಹ ದೇಶಗಳ ಮೇಲೆ ಧಾರ್ಮಿಕ ಪ್ರಭಾವ ಅತಿ

ಕಡಿಮೆಯಿರುವುದೂ ಕೂಡ ತಿಳಿದುಬರುತ್ತದೆ. ಹಾಗಾಗಿ ಒಂದು ದೇಶದ ಪ್ರಗತಿಯ ಮಟ್ಟಕ್ಕೂ ಅಲ್ಲಿನ ಧಾರ್ಮಿಕ ಪ್ರಭಾವಕ್ಕೂ ಇರುವ ಸಂಬಂಧ ವಿಲೋಮ ಪ್ರಮಾಣದಲ್ಲಿರುವುದನ್ನು ನಾವು ಕಾಣಬಹುದು. ವಿಮರ್ಷಾತೀತ ಧಾರ್ಮಿಕ ನಂಬಿಕೆಯು ಮನುಷ್ಯನನ್ನು ಮಧ್ಯಯುಗೀನ ಸ್ಥಿತಿಗೆ ಕೊಂಡೊಯ್ಯುವುದು ಖಂಡಿತ.

ಭಾರತದಂತಹ ಒಂದು ಬಹುಧರ್ಮಿಯ ಬಹುಭಾಷಿಕ ವಿಭಿನ್ನ ಸಂಸ್ಕೃತಿಗಳ ಹಿನ್ನಲೆಯುಳ್ಳ ದೇಶದಲ್ಲಿ ಧಾರ್ಮಿಕ ಮತಾಚರಣೆಗಳು ವೈಯಕ್ತಿಕ ಪರಿಧಿಗಳನ್ನು ಮೀರಿ ಸಾರ್ವಜನಿಕಗೊಳ್ಳತೊಡಗಿದಾಗ ಉಂಟಾಗಬಹುದಾದ ಘರ್ಷಣೆಗಳನ್ನು ದುಷ್ಪರಿಣಾಮಗಳನ್ನು ಮನದಟ್ಟುಮಾಡಿಕೊಡುವ, ಸಂಕುಚಿತ ಭಾವನೆಗಳನ್ನು ಮೀರಿ ಇಡೀ ಮನುಕುಲದ ಹಿತವನ್ನು ಬಯಸುವ ಉದಾತ್ತ ಚಿಂತನೆಗಳನ್ನು ಭಿತ್ತಿ ಬೆಳೆಯುವ ಸಾಮುದಾಯಿಕ ಶಿಕ್ಷಣವು ಧರ್ಮನಿರಪೇಕ್ಷತೆಯ ಯಶಸ್ಸಿಗೆ ಅನಿವಾರ್ಯ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಈ ದಿಸೆಯಲ್ಲಿ ಯಾವುದೇ ಪ್ರಯತ್ನಗಳು ನಡೆದಿಲ್ಲ. ಇದಕ್ಕೆ ಪ್ರತಿಯಾಗಿ ಧರ್ಮನಿರಪೇಕ್ಷತೆಯ ಕಲ್ಪನೆಗೆ ವಿರುದ್ಧವಾಗಿ ಹಿಂದೂ ಪುನರುತ್ಥಾನ ವಾದವೇ ಇಲ್ಲಿ ತನ್ನ ನೆಲೆಯನ್ನು ಗಟ್ಟಿಗೊಳಿಸಿಕೊಳ್ಳತೊಡಗಿದೆ. ಇದು ಧರ್ಮನಿರಪೇಕ್ಷ ರಾಷ್ಟ್ರೀಯತೆಯ ಹಿನ್ನಡೆಯೆಂದೇ ಭಾವಿಸಬಹುದು.

ಭಾರತದ ಸಂವಿಧಾನದಲ್ಲಿನ ಅಸ್ಪಷ್ಟತೆಗಳು, ಅಂತರಿಕ ಒಡಕುಗಳು ಏನೇ ಇದ್ದರೂ ಭಾರತವನ್ನು ಒಂದು ಬಹು ಸಾಂಸ್ಕೃತಿಕ ಸಮಾಜವನ್ನಾಗಿ ಪರಿಗಣಿಸಿ ಅದರ ಬಹುರೂಪತೆಯನ್ನು ಉಳಿಸಿ ಬೆಳೆಸುವ ಗುರಿಯಂತೂ ಅದಕ್ಕಿದೆ. ಧರ್ಮ ಹಾಗೂ ರಾಜಕಾರಣಗಳ ನಡುವೆ ಸೂಕ್ಷ್ಮವಾದ, ಅಸ್ಪಷ್ಟವಾದ, ಆದರೆ ಅತ್ಯಂತ ಮಹತ್ವಪೂರ್ಣವಾದ ಪ್ರತ್ಯೇಕತೆಯ ಗೆರೆಯನ್ನು ಸ್ಪಷ್ಟಪಡಿಸಲು ಪ್ರಯತ್ನಿಸುವ ಧರ್ಮನಿರಪೇಕ್ಷತೆಯ ಆಶಯವು ಆ ಮೂಲಕ ರಾಜಕೀಯವನ್ನು ಧಾರ್ಮಿಕ ಹಿತಾಸಕ್ತಿಗಳಿಂದ ಮುಕ್ತವಾಗಿರಿಸಲು ಪ್ರಯತ್ನಿಸುತ್ತದೆ. ವಿವಿಧ ಧಾರ್ಮಿಕ ಹಾಗು ಸಾಂಸ್ಕೃತಿಕ ಹಿತಾಸಕ್ತಿಗಳ ನಡುವೆ ಘರ್ಷಣೆಗಳುಂಟಾದಾಗ ಅವುಗಳಿಂದ ಸಮಾನ ದೂರದಲ್ಲಿ ನಿಂತು ವಿವಾದಗಳನ್ನು ನ್ಯಾಯಯುತವಾಗಿ ಪರಿಹರಿಸುವ, ಅಲ್ಪಸಂಖ್ಯಾತರ ಹಿತರಕ್ಷಣೆಯನ್ನು ಮಾಡುವ ಜವಾಬ್ದಾರಿಗಳನ್ನು ಸರ್ಕಾರಗಳು ನಿರ್ವಹಿಸಬೇಕಾದುದರಿಂದ ರಾಜಕಾರಣದ ಸ್ವಾಯತ್ತತೆಯನ್ನು ಧರ್ಮನಿರಪೇಕ್ಷತೆಯು ಪ್ರತಿಪಾದಿಸುತ್ತಿದೆ. ●

ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ.
ಬೆಳೆಯುತ್ತಾ ನಾವು ಅದನ್ನು ಅಲ್ಪ ಮಾನವನನ್ನಾಗಿ ಮಾಡುತ್ತೇವೆ.
ಮತ್ತೆ ಅದನ್ನು ವಿಶ್ವಮಾನವನನ್ನಾಗಿ ಮಾಡುವುದು ವಿದ್ಯೆಯ
ಕರ್ತವ್ಯವಾಗಬೇಕು.

\- ಕುವೆಂಪು

ರಾಷ್ಟ್ರೀಯ ಐಕ್ಯತೆ ಮತ್ತು ಜಾತ್ಯತೀತತೆ

– ಜೆ.ಪಿ

ಇಂದು ಚರ್ಚಿತವಾಗುತ್ತಿರುವ ರಾಷ್ಟ್ರೀಯತೆಯ ಕಲ್ಪನೆಯ ವಿಚಾರದಲ್ಲಿ ಜಾತ್ಯತೀತತೆಯ ವಿಚಾರವೂ ಅಡಗಿದೆ. ಕೆಲವರು ವಾದಿಸುತ್ತಿರುವ 'ಹಿಂದೂ ರಾಷ್ಟ್ರ'ದ ವ್ಯಾಖ್ಯಾನವೇ ಜಾತ್ಯತೀತತೆಗೆ ವಿರುದ್ಧವಾದುದು. ಅವರ ವಾದದಲ್ಲಿ ಹಿಂದೂಗಳಷ್ಟೇ ಈ ಮಣ್ಣಿನ ಮಕ್ಕಳು ಎಂದೂ, ಅವರು ಪ್ರಥಮ ದರ್ಜೆಯ ನಾಗರಿಕರು ಎಂಬ ವಾದ ಮಂಡಿತವಾಗುತ್ತಿದೆ. ಈ ಕಲ್ಪನೆಯು ರಾಷ್ಟ್ರದ ಐಕ್ಯತೆಯ ದೃಷ್ಟಿಯಿಂದ ವಿಚ್ಛಿದ್ರಕಾರಿಯಾದುದು, ಏಕೆಂದರೆ ಹಿಂದೂಗಳಲ್ಲದವರು ಎರಡನೇ ದರ್ಜೆಯ ನಾಗರಿಕರು ಎಂದೊಡನೆಯೇ ಅಂತ್ಯ ಕಾಣದ ಕಲಹಗಳಿಗೆ ಕಾರಣವಾಗಿ ಅಂತಿಮವಾಗಿ ವಿಭಜನೆಗೆ ಕಾರಣವಾಗುತ್ತದೆ. ಹಿಂದೂ ಧರ್ಮದ ಒಳಗೇ ಇರುವ ಜಾತಿ ವ್ಯವಸ್ಥೆ ಮತ್ತು ಅದಕ್ಕೆ ಬಲವಾಗಿ ಅಂಟಿಕೊಂಡಿರುವ ಅಸ್ಪ್ರಶ್ಯತೆಯ ಆಚರಣೆಯಿಂದಾಗಿಯೇ ಹಿಂದೂ ರಾಷ್ಟ್ರದ ನಿರ್ಮಾಣದ ಪ್ರಯತ್ನ ವಿಚ್ಛಿದ್ರಕಾರಿಯಾಗಿರುತ್ತದೆ. ಹಿಂದೂ ಧರ್ಮದ ರಚನೆಯ ಬಹುಧರ್ಮೀಯ ಮತ್ತು ಬಹು ಮತೀಯ ಪರಿಸ್ಥಿತಿಯಿಂದಾಗಿ ಜಾತ್ಯತೀತ ವ್ಯವಸ್ಥೆಯು ಈ ರಾಷ್ಟ್ರದ ವ್ಯವಹಾರದಲ್ಲಿ ಮತ್ತು ರಾಷ್ಟ್ರದ ಐಕ್ಯತೆಯ ವಿಚಾರದಲ್ಲಿ ಅನಿವಾರ್ಯವಾಗುತ್ತದೆ.

ಜಾತ್ಯತೀತತೆಗೆ ಹಲವು ಅರ್ಥಗಳಿದ್ದರೂ ಇಲ್ಲಿ ರಾಷ್ಟ್ರೀಯ ಐಕ್ಯತೆಯ ದೃಷ್ಟಿಯಿಂದ ಈ ಶಬ್ದವನ್ನು ಯಾವ ಅರ್ಥದಲ್ಲಿ ಬಳಸಲಾಗುತ್ತಿದೆ ಎಂದು ತಿಳಿಯಬೇಕಿದೆ. ಹಲವು ಸಲ ಜಾತ್ಯತೀತತೆಯನ್ನು ಧರ್ಮ ವಿರೋಧ, ನಾಸ್ತಿಕತೆ ಮತ್ತು ಭೌತಿಕವಾದದೊಂದಿಗೆ ಸಮೀಕ-ರಿಸಲಾಗುತ್ತದೆ. ಈ ಅರ್ಥವು ಧಾರ್ಮಿಕ ಮನೋಭಾವದ ಭಾರತೀಯ ಜನರ ಐಕ್ಯತೆಯ ದೃಷ್ಟಿಯಿಂದ ಅಪ್ರಸ್ತುತವಾದುದಾಗಿದೆ. ಹಾಗಾಗಿ ಜಾತ್ಯತೀತತೆಗೆ ಎಲ್ಲರೂ ಒಪ್ಪಬಹುದಾದ ವ್ಯಾಪಕವಾದ ಮತ್ತು ವಿಶಾಲವಾದ ವ್ಯಾಖ್ಯೆಯನ್ನು ನೀಡಬೇಕಿದೆ.

ಈ ವ್ಯಾಪ್ತಿಯಲ್ಲಿ ಜಾತ್ಯತೀತತೆಯ ವಿಚಾರವನ್ನು ಪ್ರಭುತ್ವ ಮತ್ತು ಸಮಾಜದ ಸಂಬಂಧದ ದೃಷ್ಟಿಯಿಂದ ನಾವು ಗ್ರಹಿಸಬೇಕಿದೆ. ಈ ದೇಶದ ಸಂವಿಧಾನದ ರಚನಕಾರರು ಜಾತ್ಯತೀತತೆ ಎಂಬ

ಶಬ್ದವನ್ನು ಸಂವಿಧಾನದಲ್ಲಿ ಬಳಸಿಲ್ಲವಾದರೂ ಜಾತ್ಯತೀತತೆಯ ವಿಚಾರವನ್ನು ಸಂವಿಧಾನದಲ್ಲಿ ಅಳವಡಿಸಿದ್ದಾರೆ. ಭಾರತದ ಸಂವಿಧಾನವು ಅಮೇರಿಕಾದ ಸಂವಿಧಾನದಂತೆ ಜಾತ್ಯತೀತತೆಯ ಬಗ್ಗೆ ಗಡುಸಾದ ನಿಲುವನ್ನು ಹೊಂದಿಲ್ಲ. ಭಾರತದ ಸಂವಿಧಾನವು ಅಧಿಕೃತವಾದ ಧರ್ಮವನ್ನು ಹೊಂದಿಲ್ಲದಿದ್ದರೂ ಅದು ಧರ್ಮಗಳ ವಿಷಯದಲ್ಲಿ ಉದಾರವಾದ ಅಲಿಪ್ತತೆಯನ್ನು ಹೊಂದಿದೆ. ಆದರೆ ಅದೇ ಸಂದರ್ಭದಲ್ಲಿ ಧರ್ಮದೊಂದಿಗೆ ಸಮೀಕರಣಗೊಂಡಿರುವ ಜಾತ್ಯತೀತತೆಯ ಪರವಾಗಿ ಶಾಸನ ರಚಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಹಲವು ಸಲ ಧಾರ್ಮಿಕ ನಂಬಿಕೆಗಳಲ್ಲಿ ಮತ್ತು ಆಚರಣೆಗಳಲ್ಲಿ ಸರ್ಕಾರ ಮೂಗುತೂರಿಸುತ್ತಿದೆ ಎನಿಸಿದರೂ ಸಮಾಜದ ಒಳಿತಿಗಾಗಿ ಮತ್ತು ಸುಧಾರಣೆಗಾಗಿ ಧರ್ಮದ ನಂಬಿಕೆ ಮತ್ತು ಆಚರಣೆಯ ವಿರುದ್ಧ ಶಾಸನ ರಚಿಸುವ ಹಕ್ಕನ್ನು ಅದು ಕಾಯ್ದಿರಿಸಿಕೊಂಡಿದೆ.

ಪ್ರಭುತ್ವ ಮತ್ತು ಧರ್ಮ

ಹಿಂದೂ ರಾಷ್ಟ್ರ ನಿರ್ಮಾಣದ ಬೆಂಬಲಿಗರು ಪ್ರಭುತ್ವವು ಜಾತ್ಯತೀತ ಧೋರಣೆ ಹೊಂದುವುದನ್ನು ವಿರೋಧಿಸುತ್ತಾರೆ. ಹಿಂದೂ ರಾಜಕೀಯ ಚಿಂತನೆಗಳು ಮತ್ತು ಆಚರಣೆಗಳು ಪ್ರಭುತ್ವವನ್ನು ಮತ್ತು ಧರ್ಮವನ್ನು ಪ್ರತ್ಯೇಕವಾಗಿ ನೋಡುತ್ತವೆ ಎಂಬುದನ್ನು ನಾವಿಲ್ಲಿ ಗಮನಿಸಬೇಕು. ನಮಗೆ ತಿಳಿದಿರುವಂತೆ ಹಿಂದೂ ರಾಜರುಗಳು ತಮ್ಮ ಪ್ರಜೆಗಳ ಮೇಲೆ ಯಾವುದೋ ಗೊತ್ತಾದ ಧರ್ಮವನ್ನು ಆಚರಿಸುವಂತೆ ಒತ್ತಡ ಹೇರಲಿಲ್ಲ. ಹಲವು ಧರ್ಮಗಳ ಆಚರಣೆಗೆ ಅವಕಾಶವನ್ನು ನೀಡುವುದಲ್ಲದೆ ಹಲವು ಸಲ ಅನ್ಯಧರ್ಮೀಯರು ಮತ ಪ್ರಚಾರ ಮಾಡಲು, ಆರಾಧನೆಗೆ ಕಟ್ಟಡ ನಿರ್ಮಿಸಲು ಮತ್ತು ಇಚ್ಛೆಯಂತೆ ಬದುಕಲು ಅವಕಾಶ ಮಾಡಿಕೊಟ್ಟರು. ಭಾರತದ ಚರಿತ್ರೆಯನ್ನು ನೋಡಿದಲ್ಲಿ ಯುರೋಪಿನಲ್ಲಿ ಆದಂತೆ ಎಲ್ಲಿಯೂ ಧರ್ಮಪ್ರಜ್ಞೆಗಾಗಿ ಹೋರಾಟ ನಡೆದ ಘಟನೆಗಳಿಲ್ಲ.

ಎಂ.ಸಿ.ಸೆಕಲ್ವಾಡ್ ಅವರು ಹೇಳುವಂತೆ 'ಭಾರತೀಯ ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಿಂತಕರು ಅವರ ಚಿಂತನೆಯಲ್ಲಿ ಸಂಪೂರ್ಣ ಸ್ವತಂತ್ರವನ್ನು ಬಹಳ ಕಾಲದವರಗೆ ಹೊಂದಿದ್ದರು. ಚಿಂತನಾ ಸ್ವಾತಂತ್ರ್ಯ ಪ್ರಾಚೀನ ಭಾರತದಲ್ಲಿ ಎಷ್ಟಿತ್ತೆಂದರೆ, ಅದನ್ನು ಪಾಶ್ಚಿಮಾತ್ಯ ಪರಿಸ್ಥಿತಿಯೊಂದಿಗೆ ಹೋಲಿಸಲು ಸಾಧ್ಯವೇ ಇಲ್ಲ' ಈ ವಿಷಯದಲ್ಲಿ ಎಲ್ಲರದ್ದೂ ಏಕ ಅಭಿಪ್ರಾಯವಾಗಿದೆ.

ಇಸ್ಲಾಂ ಧರ್ಮಕ್ಕೂ, ಅದರ ಆಡಳಿತಗಾರರಿಗೂ ಬಿಡಿಸಿಕೊಳ್ಳದ ಸಂಬಂಧ ಇದ್ದುದ-ರಿಂದ ಇಂದು ಭಾರತೀಯ ಮುಸುಲ್ಮಾನರಿಗೆ ಜಾತ್ಯತೀತ ವ್ಯವಸ್ಥೆಗೆ ಹೊಂದಿಕೊಳ್ಳುವುದು ಕಷ್ಟವಾಗಿದೆ. ಆ ಧರ್ಮದ ಸಂಪ್ರದಾಯವಾದಿಗಳು ಜಾತ್ಯತೀತ ವ್ಯವಸ್ಥೆಗಿಂತ ಹಿಂದೂ ರಾಷ್ಟ್ರದಲ್ಲಿ, ತಮ್ಮ ಧರ್ಮವನ್ನು ಪಾಲಿಸುತ್ತಾ ಮ್ಲೇಚ್ಛರಾಗಿ ಉಳಿದಿರಲು ಸಿದ್ಧರಿದ್ದಾರೆ. ಹೀಗೆ ಎರಡೂ ಧರ್ಮಗಳ ತೀವ್ರವಾದಿಗಳು ಸ್ಪಂದಿಸುವ ರೀತಿ ಮತ್ತು ಅವರು ಹೇಗೆ ಒಬ್ಬರಿಗೊಬ್ಬರು ಊರೆ ಕೊಡುತ್ತಾರೆ ಎಂಬುದೇ ಕುತೂಹಲಕಾರಿ ವಿಷಯ. ಈ ಶಾಶ್ವತವಾದ ದೇಶ ವಿಭಜನೆ ಕೇವಲ ಧಾರ್ಮಿಕವಾಗಿರದೆ ರಾಜಕೀಯವಾಗಿಯೂ ಭಿನ್ನವಾಗಿ ರಾಷ್ಟ್ರೀಯ ಐಕ್ಯತೆಗೆ ಶಾಶ್ವತವಾದ ಮತ್ತು ದುಸ್ತರವಾದ ತಡೆಗೋಡೆಯಾಗಿ ಪರಿಣಮಿಸಿದೆ.

ರಾಷ್ಟ್ರೀಯ ಐಕ್ಯತೆಯ ಅಗತ್ಯತೆಗಳು

ರಾಷ್ಟ್ರೀಯ ಐಕ್ಯತೆಗಾಗಿ ಪ್ರಭುತ್ವ ಮಾತ್ರ ಜಾತ್ಯತೀತವಾಗಿದ್ದರೆ ಸಾಲದು. ಸಾಮಾಜಿಕ ಬದುಕು ಕೂಡ ಧರ್ಮದ ಎಲ್ಲೆ ಮೀರಿ ಜಾತ್ಯತೀತವಾಗಿರಬೇಕು. ಇದರ ಪ್ರಭಾವ ಧಾರ್ಮಿಕ ಮತ್ತು ಧಾರ್ಮಿಕವಲ್ಲದ ಎರಡೂ ರೀತಿಯ ಸಾಮಾಜಿಕ ಬದುಕಿಗೆ ಅನ್ವಯಿಸುತ್ತದೆ. ಇದರ ಮೇಲೆ ಪ್ರಭಾವ ಬೀರುವ ಮೂರು ಮುಖ್ಯ ಅಂಶಗಳೆಂದರೆ ೧. ಸಮಾಜದ ಪ್ರತಿಯೊಬ್ಬನೂ ತನ್ನ ಸ್ವಧರ್ಮಕ್ಕೆ ಬದ್ಧನಾಗಿದ್ದು ಅದು ಶ್ರೇಷ್ಠ ಎಂದು ಭಾವಿಸುತ್ತಲೇ ಪರಧರ್ಮಗಳನ್ನು ಗೌರವಿಸಿ ಅವುಗಳನ್ನು ಅರ್ಥಮಾಡಿಕೊಂಡು ಅದರ ಬಗ್ಗೆ ಸಹಿಷ್ಣತೆಯನ್ನು ಬೆಳೆಸಿಕೊಳ್ಳಬೇಕು. ೨. ಮತೀಯ ಭಾವನೆಯನ್ನು ಹೊರಗಿಟ್ಟು ಸಾಮಾಜಿಕ ಬದುಕನ್ನು ವಿವೇಚನೆಯಿಂದ, ನೈತಿ-ಕವಾಗಿ, ಮಾನವೀಯ ದೃಷ್ಟಿಕೋನದಿಂದ ಕಟ್ಟಿಕೊಳ್ಳುವಂತಾಗಬೇಕು. ೩. ಧರ್ಮದ ತಿರುಳನ್ನು ಗ್ರಹಿಸುತ್ತಾ ಹಿಂದೂ ಧರ್ಮದೊಂದಿಗೆ ಮಿಳಿತವಾಗಿರುವ ಕಂದಾಚಾರಗಳಾದ ಸತಿ, ಅಸ್ಪ್ರಶ್ಯತೆ, ಮೇಲು ಜಾತಿ, ಕೀಳು ಜಾತಿಯ ನಂಬಿಕೆಗಳು ಹೋಗಬೇಕು ಹಾಗೆಯೇ ಇಸ್ಲಾಂ ಧರ್ಮದ ಭಾಗವಾಗಿರುವ ಬಹುಪತ್ನಿತ್ವ ಮತ್ತು ಆ ರೀತಿಯ ಇತರ ನೈತಿಕ ಕೇಡುಗಳು, ಮೌಢ್ಯಗಳು ಅಳಿಸಿಹೋಗಬೇಕು.

ಭಾರತೀಯ ಸಮಾಜ ಇದರ ಸೂಕ್ಷ್ಮಗಳನ್ನು ಗ್ರಹಿಸುವ ಸ್ಥಿತಿಯಲ್ಲಿ ಇಂದು ಇಲ್ಲ. ಹಿಂದೂ ಮುಸ್ಲಿಂ ಎಂಬ ಮತೀಯ ಭಾವನೆಗಳು ರಾಷ್ಟ್ರೀಯ ಕಲ್ಪನೆಯ ವಿರುದ್ಧವಾದ ಸೆಳೆತಗಳಾಗಿವೆ. ಇದರಿಂದಾಗಿ ದೇಶದ ಏಕತೆಗೆ ಮತ್ತು ಸಮಾಜದ ಸೌಹಾರ್ದತೆಗೆ ಬಹಳ ದೊಡ್ಡ ಅಪಾಯವಾಗಿ ಪರಿಣಮಿಸಿವೆ. ದುರದೃಷ್ಟವಶಾತ್ ನಮ್ಮ ರಾಜಕಾರಣಿಗಳು ಜನರ ಮೌಢ್ಯವನ್ನು, ಗೊಡ್ಡು ಆಚರಣೆಗಳನ್ನು ಮತ್ತು ಪ್ರತಿಯೊಂದು ಧಾರ್ಮಿಕ ಮತ್ತು ಜಾತಿಯ ಪೂರ್ವಗ್ರಹಗಳನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಇದು ಆಧುನಿಕ ವಿಜ್ಞಾನ ನೀಡಿರುವ ತಿಳಿವಳಿಕೆಯನ್ನು ಮತ್ತು ಪ್ರಾಚೀನ ಭಾರತದ ಆಧ್ಯಾತ್ಮಿಕತೆಯನ್ನೂ ನಾಶಮಾಡತೊಡಗಿದೆ. ಉಪನಿಷತ್ ಕಾಲದಲ್ಲಿ ಭಾರತೀಯ ಚಿಂತನೆಗಳು ಯಾವುದೇ ಸಂಕೋಲೆಗಳಿಲ್ಲದೆ ಎತ್ತೆತ್ತರಕ್ಕೆ ಹಾರಿದ್ದನನ್ನು ನಾವು ಮರೆಯಬಾರದು.

ಈ ಎಲ್ಲ ಅಂಶಗಳ ಕಾರಣದಿಂದಾಗಿ ಭಾರತೀಯ ಏಕತೆಯ ಪ್ರಕ್ರಿಯೆಯು, ಬೌದ್ಧಿಕ ಮತ್ತು ಆಧ್ಯಾತ್ಮಿಕ ಉನ್ನತಿಯ ಪ್ರಕ್ರಿಯೆ ಎಂಬುದನ್ನು ಎಲ್ಲರೂ ಮನಗಾಣಬೇಕು. ●

ಯಾವ ಧರ್ಮವು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಹೇಳಿ ಕೊಡುವುದೋ ಆ ಧರ್ಮವನ್ನು ನಾನು ಇಷ್ಟಪಡುತ್ತೇನೆ.

- ಬಿ.ಆರ್.ಅಂಬೇಡ್ಕರ್

ಕಂಡದ್ದು

ಹೊರಗುತ್ತಿಗೆ ಕೆಲಸದ ಯುವತಿಯ ಕತೆ

ಮೊನ್ನೆಯ ದಿನ ಕಳೆದ ೭ ವರ್ಷಗಳಿಂದ ನನಗೆ ಪರಿಚಯವಿರುವ ಯುವತಿ ನಮ್ಮಲ್ಲಿಗೆ ಬಂದಿದ್ದಳು. ನನ್ನ ಬಗ್ಗೆ ಆಕೆಗೋನೋ ಅಭಿಮಾನ. ಭೇಟಿಯಾದಗಲೆಲ್ಲಾ ತನ್ನ ಕಷ್ಟ ಸುಖಗಳನ್ನು ನನ್ನಲ್ಲಿ ಹೇಳಿಕೊಂಡು ಒಂದಿಷ್ಟು ಕಣ್ಣೀರು ಹಾಕಿ ನನ್ನಿಂದ ಸಮಾಧಾನ ಪಡೆಯುವುದು ವಾಡಿಕೆಯಾಗಿದೆ.

ಮೂವತ್ತರ ಆಸುಪಾಸಿನಲ್ಲಿರುವ ಬಡ ದಲಿತ ಕುಟುಂಬದಿಂದ ಬಂದ ಈ ಯುವತಿ ಸ್ನಾತಕೋತ್ತರ ಪದವಿ ಪಡೆದಿದ್ದಾಳೆ. ಸಣ್ಣ ವಯಸ್ಸಿನಲ್ಲೇ ತನ್ನ ತಂದೆಯನ್ನು ಕಳೆದು ಕೊಂಡಿರುವ ಈಕೆಯ ಮನೆಯಲ್ಲಿ ಅಷ್ಟಾಗಿ ಆರೋಗ್ಯ ಸರಿಯಿಲ್ಲದ ತಾಯಿ ಮತ್ತು ಬೇಜವಾಬ್ದಾರಿ ಅಣ್ಣ ಇದ್ದಾರೆ. ೭ ವರ್ಷದ ಹಿಂದೆ ಗುತ್ತಿಗೆ ಆಧಾರದ ಮೇಲೆ ಸರ್ಕಾರಿ ಇಲಾಖೆಯಲ್ಲಿ ಕೆಲಸ ಪಡೆದಾಗ ತನ್ನ ಬದುಕಿಗೊಂದು ಅರ್ಥ ಸಿಕ್ಕಿತು, ತನ್ನ ಮತ್ತು ಕುಟುಂದ ಸಮಸ್ಯೆ ಬಗೆಹರಿಯಿತು ಎಂದು ನಗುನಗುತ್ತಾ ಸಿಹಿ ತಂದು ಕೊಟ್ಟು ನನಗೆ ಬಲವಂತವಾಗಿ ತಿನ್ನಿಸಿದ್ದು ಇನ್ನೂ ನನ್ನ ನೆನಪಿನಲ್ಲಿ ಹಸಿರಾಗಿದೆ.

ಬಹಳ ತಿಂಗಳ ನಂತರ ಮೊನ್ನೆ ವಿರಾಮವಾಗಿ ಭೇಟಿಯಾದ ಆ ಯುವತಿಯ ಮುಖದಲ್ಲಿ ಮೊದಲಿನ ಗೆಲುವಿಲ್ಲ ಏನೋ ಬೇಸರ, ಆತಂಕ. ಒಂದಷ್ಟು ದಿನ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಿದರೆ ನಂತರ ಕೆಲಸ ಖಾಯಂ ಆಗಬಹುದೆಂಬ ಆಕೆಯ ಕನಸು ಕನಸಾಗಿಯೇ ಉಳಿದು ಬಿಡಬಹದೇನೋ ಎಂದು ಆಕೆಗೆ ಅನಿಸ ತೊಡಗಿದೆ.

ಕೆಲಸದಲ್ಲಿ ಇವಳು ಗುತ್ತಿಗೆ ನೌಕರಳೆಂದು ಸಹೋದ್ಯೋಗಿಗಳು ಈಕೆಯೊಂದಿಗೆ ನಡೆದು ಕೊಳ್ಳುವ ರೀತಿ ಅವಳನ್ನು ಮತ್ತಷ್ಟು ಕುಬ್ಜ ಮಾಡಿದೆ. ಆಕೆಗೆ ಕೆಲಸ ಕೊಟ್ಟಿರುವ ಗುತ್ತಿಗೆದಾರ ಅವಳಿಗೆ ಗೊತ್ತು ಮಾಡಿರುವ ಸಂಬಳ ಮಾಸಿಕ ೨೧ ಸಾವಿರದಲ್ಲಿ ತೆರಿಗೆ ಎಂದು ಶೇ ೧೫, ಟಿಡಿಎಸ್ ಎಂದು ಶೇ ೨ ಮತ್ತು ಪ್ರೊಫೆಶನಲ್ ಟ್ಯಾಕ್ಸ್ ಎಂದು ೨೦೦ ರೂ ಹೀಗೆ ಕಟಾಯಿಸಿ ಕೊಂಡು ಕಡೆಗೆ ೧೬ ಸಾವಿರ ರೂ ಕೊಡುತ್ತಾನೆ. ಆದರೆ ಈ ೧೬ ಸಾವಿರ ಕೊಟ್ಟು ಆಗಲೇ ೬ ತಿಂಗಳು ಕಳೆದಿದೆ. ಸರ್ಕಾರ ಇನ್ನೂ ಹಣ ಬಿಡುಗಡೆ ಮಾಡಿಲ್ಲ ಎಂದು ಗುತ್ತಿಗೆದಾರ ಹೇಳುತ್ತಿದ್ದಾನೆ. ಇನ್ನು ಆಕೆಯದು ಇಡೀ ಜಿಲ್ಲೆ ಸುತ್ತುವ ಕೆಲಸ. ಅವಳಿಗೆ ಟಿ ಎ ಹಣ ಬಿಡುಗಡೆ ಯಾಗಿ ಒಂದು ವರ್ಷವೇ ಆಗಿದೆ. ಪ್ರತಿಸಲ ಸರ್ಕಾರಿ ಕೆಲಸಕ್ಕೆ ಹೋಗುವಾಗಲು ಅವರಿವ- ರಿಂದ ನೂರು ಇನ್ನೂರು ಬೇಡಿಕೊಂಡು ಹೋಗಬೇಕು. ಅವಳಿಗೆ ಗೊತ್ತಾಗಿದ್ದ ಮದುವೆ ಏಕೋ ಸರಿಹೋಗುತ್ತಲೇ ಇಲ್ಲ. ಈ ಎಲ್ಲ ದು:ಖದಿಂದ ನನ್ನ ಮುಂದೆ ಅವಳ ಬ್ಯಾಂಕ್ ಪುಸ್ತಕ ಬಿಸಾಡಿದಳು . ನಾನು ಸೌಜನ್ಯದಿಂದ ಆ ಪುಸ್ತಕವನ್ನು ತೆರೆಯಲು ಹೋಗಲಿಲ್ಲ. ನೋಡಿ ಸಾರ್ ನೋಡಿ ಎಂದು ದು:ಖದಿಂದ ಪಾಸ್ ಪುಸ್ತಕ ನೋಡಲು ಒತ್ತಾಯಿಸಿದಳು. ತೆರೆದು ನೋಡಿದೆ. ಅದರಲ್ಲಿ ೧೬ ರೂ ಉಳಿತಾಯ ಇದ್ದದ್ದು ಕಾಣಿಸಿತು. ●

ಜನಪದ ಡೈರಿ



ರಾಜ್ಯ ಮಟ್ಟದ ಕಾರ್ಯಾಗಾರ

ಜನವರಿ ೪ ಗಾಂಧಿಯ ಅರ್ಥಶಾಸ್ತ್ರಜ್ಞ ಜೆ.ಸಿ. ಕುಮಾರಪ್ಪನವರ ಹುಟ್ಟಿದ ದಿನ. ಆ ಸಂದರ್ಭದಲ್ಲಿ ಹೊಸ ಜೀವನ ದಾರಿ ಕೇಂದ್ರದಲ್ಲಿ ಮೂರು ದಿನಗಳ 'ಪರಿಸರ, ಅಭಿವೃದ್ಧಿ ಮತ್ತು ಜೀವನ ಶೈಲಿ' ಕುರಿತ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ರಾಜ್ಯದ ವಿವಿದೆಡೆಯಿಂದ ೨೪ ಆಸಕ್ತರು ಶಿಬಿರದಲ್ಲಿ ಭಾಗವಹಿಸಿದ್ದರು. ಮೊದಲನೆಯ ದಿನ ಶಿಬಿರವನ್ನು ನಾಡಿನ ಹಿರಿಯ ಹೋರಾಟಗಾರ ಶ್ರೀ ಎಚ್.ಎಸ್. ದೊರೆಸ್ವಾಮಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ನಡೆದ ಮೂರು ಗೋಷ್ಠಿಗಳಲ್ಲಿ ಪರಿಸರ, ಅಭಿವೃದ್ಧಿ ಮತ್ತು ಜೀವನ ಶೈಲಿ ಕುರಿತ ವಿಷಯ ಮಂಡನೆ ಮತ್ತು ಚರ್ಚೆ ನಡೆಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಯುತರಾದ ಮನು, ಯು.ಎನ್.ರವಿಕುಮಾರ, ಪಾಂಡುರಂಗ ಹೆಗಡೆ, ಜಗದೀಶ ಕೊಪ್ಪ ಅಶೋಕರಾವ್, ಪ್ರದೀಪ್, ದೀಪಕ್ ಮಲಘಾಣ್, ಅನಂತಶಯನ ಅವರಿದ್ದರು. ಪ್ರತಿ ಸಂಜೆ ಸಾಕ್ಷ್ಯಚಿತ್ರಗಳ ಪ್ರದರ್ಶನ ಮತ್ತು ಚರ್ಚೆ ಮತ್ತು ಪ್ರತಿ ಬೆಳಿಗ್ಗೆ ಪರಿಸರ ನಡಿಗೆ, ಶ್ರಮದಾನ ಮತ್ತು ಅಧ್ಯಯನ ಇದ್ದಿತು.



ತಿಂಗಳ ಕವನಕ್ಕೊಂದು ಟಿಪ್ಪಣಿ

– ಎನ್. ಶ್ರೀನಿವಾಸ ಉಡುಪ


'ದಾಸರೆಂದರೆ ಪುರಂದರದಾಸರಯ್ಯಾ' ಎಂದು ತಮ್ಮ ಗುರು ವ್ಯಾಸರಾಯರಿಂದಲೇ ಪ್ರಶಂಸಿಸಲ್ಪಟ್ಟ ಪುರಂದರದಾಸರನ್ನು ಕುರಿತು ಶ್ರೀ ಕೆ.ಎಸ್. ನಿಸಾರ್ ಅಹಮದ್ ಅವರು ರಚಿಸಿದ ಈ ಕವಿತೆ 'ದಾಸರೆಂದರೆ ನಮ್ಮ ವರ ಪುರಂದರರಯ್ಯ' ಎಂಬ ಸಾಲಿನಿಂದಲೇ ಪ್ರಾರಂಭವಾಗುತ್ತದೆ. ಕವಿತೆಯ ಪ್ರತಿಯೊಂದು ಚರಣವೂ ಪುರಂದರದಾಸರ ವ್ಯಕ್ತಿತ್ವದ ಹಲವು ಆಯಾಮಗಳನ್ನು ಅನಾವರಣಗೊಳಿಸುತ್ತಾ ಪ್ರಾರಂಭದ ಸಾಲಿನ ಅರ್ಥಕ್ಕೆಪುಷ್ಟಿ ನೀಡುತ್ತದೆ.

ಪೂರ್ವಾಶ್ರಮದಲ್ಲಿ ಶ್ರೀನಿವಾಸ ನಾಯಕ ಎಂಬ ಹೆಸರಿನಲ್ಲಿ ಚಿನ್ನ-ಬೆಳ್ಳಿಯ ವ್ಯಾಪಾರಿಗಳಾಗಿದ್ದ ಪುರಂದರದಾಸರು ಕಡುಲೋಭಿಯಾಗಿದ್ದವರು. 'ನವಕೋಟಿ ನಾರಾಯಣ'ರೆನ್ನಿಸಿಕೊಂಡಿದ್ದರೂ ಅವರ ಹೃದಯದಲ್ಲಿ ಹಣವೊಂದನ್ನುಳಿದು ಬೇರಾವುದಕ್ಕೂ ಸ್ಥಾನವಿರಲಿಲ್ಲ. ಐತಿಹ್ಯವೊಂದರ ಪ್ರಕಾರ ಭಗವಂತ ಒಬ್ಬ ಬಡಬ್ರಾಹ್ಮಣನ ರೂಪದಲ್ಲಿ ಯಾಚಕನಾಗಿ ಬಂದು, ಶ್ರೀನಿವಾಸ ನಾಯಕರನ್ನು ಹಠಾತ್ತನೆ ಲೌಕಿಕ ನೆಲೆಯಿಂದ ಪಾರಮಾರ್ಥಿಕ ನೆಲೆಗೆ ಕೊಂಡೊಯ್ದದ್ದು. (ಇದನ್ನೇ ಪ್ರಸಿದ್ಧವಾದ 'ಮೂಗುತಿಯ ಪವಾಡ' ಎನ್ನಲಾಗುತ್ತದೆ.) ಶ್ರೀನಿವಾಸ ನಾಯಕರ ಜೀವನದಲ್ಲಿ 'ಬೀದಿತಿರುಕನ ಹಾಗೆ' ಕಾಣಿಸಿಕೊಂಡ ದೈವ, 'ಒದ್ದೆ ಅರಿವೆಯ ಹಿಂಡಿ', ಅದರಲ್ಲಿನ ತೇವಾಂಶವನ್ನು ಆರಿಸಿದ ಹಾಗೆ, ನಾಯಕರಲ್ಲಿದ್ದ ಪ್ರಾಪಂಚಿಕ 'ರಾಗ'ವನ್ನು ಸಂಪೂರ್ಣ ನಾಶ ಮಾಡಿ, ವಿರಾಗಿಯನ್ನಾಗಿಸಿತು. ದಾಸರ ಪತ್ನಿ ತನ್ನ ನತ್ತನ್ನಷ್ಟೇ ಭಗವಂತನಿಗೆ ಸಮರ್ಪಿಸಲಿಲ್ಲ; ತನ್ನ ಪತಿಯನ್ನೂ ಕೃಷ್ಣಾರ್ಪಣ ಮಾಡಿ ಕೃತಾರ್ಥಳೆನ್ನಿಸಿಕೊಂಡಳು. ದಾಸರ ಪಾಲಿಗೆ ಆಕೆ ಭವಬಂಧನಕ್ಕೆ ಕಾರಣಳಾದ 'ಮಾಯೆ' ಆಗಲಿಲ್ಲ, ಮುಕ್ತಿಯ ಮಾರ್ಗದರ್ಶಕಳಾದಳು.

ಶ್ರೀನಿವಾಸನಾಯಕರು ವ್ಯಾಸರಾಯರ ಶಿಷ್ಯರಾಗಿ 'ಪುರಂದರದಾಸ'ರಾಗಿ ತಂಬೂರಿ ಮೀಟುತ್ತಾ, ಪ್ರಪತ್ತಿ ಧರ್ಮವನ್ನು ಪಸರಿಸುತ್ತಾ, ನಿರ್ಮೋಹಿಯಾಗಿ, ಪರಿವ್ರಾಜಕರಾದರು. ಹೃದಯತಂತಿಯನ್ನೇ ಮಿಡಿದು ಹಾಡುತ್ತಾ 'ಕರ್ನಾಟಕ ಸಂಗೀತ ಪಿತಾಮಹ'ರೆನ್ನಿಸಿಕೊಂಡರು. ಹಾಡಿನ ಮೂಲಕ ಭಗವಂತನನ್ನು ಒಲಿಸಿಕೊಂಡರು; ಸಮಾಜವನ್ನು ತಿದ್ದಿದರು. ಅವರು ಬದುಕಿನಲ್ಲಿ ಪಡೆದ ಬಗೆಬಗೆಯ ಬಣ್ಣಬಣ್ಣದ ಅನುಭವಗಳು ಭಾವಗಳು ಎಲ್ಲವೂ ಸಂಗಮಿಸಿದ್ದುಹರಿಭಕ್ತಿಯೆಂಬ ಏಕವರ್ಣದ ಅನುಭಾವದಲ್ಲಿ; ಬದುಕನ್ನೆ ದಿವ್ಯಕ್ಕೆ ಒಡ್ಡುವ 'ಕಲ್ಲು ತಿಕ್ಕುವ ಕಲ್ಲಿ'ನ ಸತ್ವಪರೀಕ್ಷೆಗಳಲ್ಲಿ.ಅವರ 'ದೇಹ ಬೀಜ'ದಿಂದ 'ಭಕ್ತಿ ಹೆಮ್ಮರ' ಬೆಳೆದು ಲೌಕಿಕರಿಗೆ ಅಲೌಕಿಕದ ತಂಪು ನೆರಳಾಯಿತು.ಅವರು ಆಲಿಸಿದ ಮಾತೆಲ್ಲಾ, ಆಡಿದ ನುಡಿಯೆಲ್ಲಾ ಹರಿನಾಮವಾಯಿತು. ಯಾವ ಸ್ಮಾರಕದ ಅಗತ್ಯವೂ ಇಲ್ಲದ ಮುಕ್ತಜೀವಿಯಾಗಿ ಬಾಳಿ, ಮರೆಯಾದ ಪುರಂದರದಾಸರು 'ವರ ಪುರಂದರ'ರಾದರು; ದಾಸಶ್ರೇಷ್ಠರೆನ್ನಿಸಿಕೊಂಡರು.

೧೯೬೪ರಲ್ಲಿ ಪ್ರಕಟವಾದ 'ನೆನೆದವರ ಮನದಲ್ಲಿ' ಎಂಬ ಸಂಕಲನದಲ್ಲಿರುವ ಪ್ರಸ್ತುತ ಕವಿತೆ ಪುರಂದರದಾಸರ ಹಿರಿಮೆಯನ್ನು ಕಟ್ಟಿಕೊಡುವುದರ ಜೊತೆಗೆ ನಿಸಾರರ ಕಾವ್ಯಮನೋಧರ್ಮಕ್ಕೂ ಕನ್ನಡಿಯಾಗುವಂತಿದೆ. ●

೧೦೦ ವರ್ಷದ ಹಿಂದೆ ಗಾಂಧಿ



ಫೆಬ್ರವರಿ ೧೯೧೮

ಪ್ರಿಯ ರಾಮದಾಸ,

ಇತ್ತೀಚಿನ ದಿನಗಳಲ್ಲಿ ನಾನು ನಿನ್ನ ಬಗ್ಗೆ ಚಿಂತಿತನಾಗಿದ್ದೇನೆ. ನಿನ್ನ ಪತ್ರದಲ್ಲಿನ ಖಿನ್ನತೆಯನ್ನು ನಾನು ಗಮನಿಸಿದ್ದೇನೆ. ನೀನು ಶಿಕ್ಷಣವನ್ನು ಹಂಬಲಿಸುತ್ತಿರುವುಂತಿದೆ. ನೀನು ನೆಲೆ ಕಂಡಿಲ್ಲ ಎಂಬ ಭಾವ ಕಾಡುತ್ತಿರುವುದು ಕಾಣುತ್ತಿದೆ. ನನ್ನೊಂದಿಗಿದ್ದಿದ್ದರೆ ನಾನು ನಿನ್ನನ್ನು ಸಂತೈಸಿ ನಿನ್ನನ್ನು ಸಂತೋಷಗೊಳಿಸಲು ಪ್ರಯತ್ನಿಸುತ್ತಿದ್ದೆ. ಬಹುಶ: ನಾನು ನಿನಗೆ ನೀಡಿದ ಪ್ರೀತಿಯಲ್ಲಿ ಏನೋ ಕೊರತೆ ಇದ್ದಿರಬೇಕು. ದಯಮಾಡಿ ನಾನು ಮಾಡಿರಬಹುದಾದ ತಪ್ಪನ್ನು ಗಮನಿಸಿ ಅದು ಯಾವುದೇ ದುರುದ್ದೇಶದಿಂದ ಆದದ್ದಲ್ಲ ಎಂದು ಅರಿತು ನನ್ನನ್ನು ಕ್ಷಮಿಸು.. ಪೋಷಕರು ಎಸಗಿದ ತಪ್ಪು ಮಕ್ಕಳ ಬದುಕನ್ನೇ ನಾಶ ಮಾಡಿಬಿಡಬಹುದು. ನಮ್ಮ ಧರ್ಮಗ್ರಂಥಗಳು ತಂದೆ-ತಾಯಿಯನ್ನು ದೇವರ ಸ್ಥಾನದಲ್ಲಿರಿಸಿವೆ. ಆದರೆ ಅವರು ಆ ಜವಾಬ್ದಾರಿ ಹೊರಲು ಸಮರ್ಥರಾಗಿಲ್ಲ. ಅವರು ಭೌತಿಕವಾಗಿ ತಲೆಮಾರಿನಿಂದ ತಲೆಮಾರಿಗೆ ಬಂದದ್ದನ್ನು ರವಾನಿಸುತ್ತಾ ಹೋಗುವುದರಿಂದ ಕೇವಲ ಮೂರ್ತರೂಪದ ಸ್ವಾರ್ಥ ಈ ಪ್ರಪಂಚಕ್ಕೆ ಬರುತ್ತಿದೆ. ನೀನು ಏಕೆ ನಿನ್ನನ್ನು ಅಯೋಗ್ಯ ಎಂದು ಕೊಳ್ಳಬೇಕು ? ನೀನು ಹಾಗೆ ಅಂದು ಕೊಂಡರೆ ನಾನು ಕೂಡ ಅಯೋಗ್ಯ ಎಂದು ಸಾಬೀತು ಆದಂತೆ ಅಲ್ಲವೆ ? ನಾನು ನನ್ನನ್ನು ಅಯೋಗ್ಯನೆಂದುಕೊಳ್ಳಲು ಸಿದ್ಧನಿಲ್ಲ. ಆಗ ನೀನು ಅಯೋಗ್ಯನೆಂದುಕೊಳ್ಳಲು ಹೇಗೆ ಸಾಧ್ಯ ? ನೀನು ಹಣಕ್ಕಾಗಿ ಕೆಲಸ ಮಾಡಬಹುದು. ಆದರೆ ಅದಕ್ಕಾಗಿ ನೀನು ಸತ್ಯವನ್ನು ತ್ಯಾಗಮಾಡುವುದಿಲ್ಲ. ನೀನು ನಿನ್ನ ಮದುವೆಯ ಬಗ್ಗೆ ವಿವೇಚನೆಯಿಂದ ವರ್ತಿಸು. ನಾನು ನನ್ನ ಕಡೆಯಿಂದ ಯಾವಾಗಲು ನಿನ್ನನ್ನು ಯೋಗ್ಯ ಮಗನೆಂದೇ ಭಾವಿಸಿದ್ದೇನೆ. ನೀನು ನನ್ನ ಕ್ಷಮೆ ಕೋರುವ ಅಗತ್ಯವಿಲ್ಲ. ನಾನು ನಿನ್ನ ಬಗ್ಗೆ ಅಸಮಾಧಾನ ಹೊಂದುವ ಯಾವ ಕಾರಣವೂ ಇಲ್ಲ. ನಿನ್ನ ಪ್ರಯೋಗಗಳೆಲ್ಲವೂ ಮುಗಿದ ಮೇಲೆ ನೀನು ನನ್ನ ಬಳಿ ಬರಬೇಕೆಂಬ ಇಚ್ಛೆ ನನ್ನದಾಗಿದೆ. ನನ್ನ ಮೇಲಿರುವ ನಿನ್ನ ಮದುವೆಯ ಜವಾಬ್ದಾರಿಯನ್ನು ನಾನು ನಿರ್ವಹಿಸಬೇಕಿದೆ. ನೀನು ಓದಬೇಕೆಂಬ ಇಚ್ಛೆಯುಳ್ಳವನಾಗಿದ್ದರೆ ನಾನು ಸಹಾಯ ಮಾಡಲು ತಯಾರಿದ್ದೇನೆ. ಅದಕ್ಕೆ ಮೊದಲು ನೀನು ನಿನ್ನ ದೇಹವನ್ನು ಕಬ್ಬಿಣದಷ್ಟು ಗಟ್ಟಿಮಾಡಿಕೊ. ಮುಂದಿನದನ್ನು ಆಮೇಲೆ ನೋಡೋಣ. ಈ ಸಮಯದಲ್ಲಿ ನಾವು ಕುಟುಂಬದರೆಲ್ಲರೂ ಚದುರಿಹೋಗಿದ್ದೇವೆ.

ನೀನು ಅಲ್ಲಿ, ಮನಿಲಾಲ್ ಫೊನಿಕ್ಸ್‌ನಲ್ಲಿ, ದೇವ ಭದ್ವಾರದಲ್ಲಿ, ಬಾ ಭಿತಿವಾರ್‌ನಲ್ಲಿ, ಹರಿಲಾಲ್ ಕಲ್ಕತ್ತಾದಲ್ಲಿ ಮತ್ತು ನಾನು ಯಾವಾಗಲೂ ಸಂಚಾರದಲ್ಲಿ. ಬಹುಶ: ನಮ್ಮ ಈ ಅಗಲಿಕೆಯ ಬದುಕು ಈ ದೇಶದ ಸೇವೆಗೆ ಅಗತ್ಯವಿರಬಹುದು ಮತ್ತು ಇದು ನಮ್ಮ ಆಧ್ಯಾತ್ಮಿಕ ಉನ್ನತಿಗೂ ಇರಬಹುದು. ಇದೆಲ್ಲವನ್ನೂ ನಾವು ಸಂತೋಷವಾಗಿ ನಮ್ಮ ಪಾಲಿಗೆ ಬಂದದ್ದು ಎಂದು ಸ್ವೀಕರಿಸೋಣ.

ಆಶೀರ್ವಾದಗಳು,

ಬಾಪು

ತಿಂಗಳ ಚಿತ್ರ



ಪರಿಸರದ ವಿಸ್ಮಯಗಳನ್ನು ಗಮನಿಸುತ್ತಿರುವ ವಾಶಿಂಗ್ಟನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು

Janapada Vichara *Kannada Monthly Digest*.
Janapada Seva Trust, Melkote, Dist-Mandya-571431
Tel: 08236 299854 email: janapada@yahoo.com
web: www.janapada.org
Printed at Chandragiri Printers,
Mandya Mob: 9945651584, 9739743237

KA/SK/MND/470/2015-17
Regd No KAR/KAN/2000/382



Mr Sar
155

ಶ್ರೀಮತಿ/ಶ್ರೀ